ಜನಪದ ಕಲ್ಯಾಣ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಅಕ್ಟೋಬರ್-೨೦೧೨ ಸಂಚಿಕೆ-೩



ಎಲ್ಲ ಧರ್ಮೀಯರಿಗೂ ಸನ್ಮತಿ ಕೊಡು ಭಗವಂತ !

ಜನಪದ ವಿಚಾರದಲ್ಲಿ

ಅಕ್ಟೋಬರ್ - ೨೦೧೨

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೧೨
ಸಂಪುಟ - ೧೩
ಸಂಚಿಕೆ - ೩

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com

web: janapada.net

ಗೋ ಸಂತತಿಯ ಕೋರಿಕೆ

ಪುಣ್ಯ ಕೋಟಿಯು ಬಳಗ ನಮ್ಮದು,
ಪುಣ್ಯ ಸಾರುವ ಪಂಥ ನಿಮ್ಮದು,
ಮಣ್ಣೆ ನಿಂದಲಿ ಹೊನ್ನುಗಳಿಸುವ
ಕೂಟ ಕಾಯಕವೆಮ್ಮದು!

ನಿಮ್ಮ ಭೂಮಿಗೆ ಬೆವರು ಸುರಿಸುತ
ನಿಮ್ಮ ಜೀವಕೆ ಹಾಲು ಕರೆಯುತ
ನಿಮ್ಮ ಒಳಿತಿಗೆ ದುಡಿವ ನಮ್ಮನು
ನಿಮ್ಮವರೆಂದೆ ಕಾಣಿರಿ!

ದುಡಿದ ನಮ್ಮನು ಮುದಿಯಕಾಲದಿ
ಖಡುಗಕೀಯಿದೆ ಸಹಜ ಸಾವನು
ಪಡೆವ ಭಾಗ್ಯವ ನೀವು ಕರುಣಿಸಿ
ಕಡೆಯ ಕೂಗನು ತಪ್ಪಿಸಿ! ಆ
ಕಡೆಯ ಹಿಂಸೆಯ ತಪ್ಪಿಸಿ!

ನಮ್ಮ ಗಂಜಳ ಕುಡಿದ ಭೂಮಿಗೆ
ನಮ್ಮ ಗೊಬ್ಬರ ಉಂಡ ಭೂಮಿಗೆ
ನಮ್ಮ ತುಳಿತದಿ ಫಲಿತ ಭೂಮಿಗೆ
ನಮ್ಮ ದೇಹವು ಸೇರಲಿ!

ಉತ್ತು ಬಿತ್ತಿದ ಹೊಲದ ಅಂಚಲಿ
ಸುತ್ತು ಕಾಣುವ ತೆವರಿ ಪಕ್ಕದಿ
ಮತ್ತೆ ಬಂಜರು ಬಿದ್ದ ಎಡೆಯಲಿ
ಸತ್ತ ನಮ್ಮನು ಹೂಳಿರಿ!
ಹೂಳಿರೆನ್ನುತ ಬೇಡಿಕೊಂಬೆವು
ಹೂಳುವಿರೆಂದು ನಂಬಿ ದುಡಿವೆವು,
ಹೂಳುವಿರೆಂದೆ ನಂಬಿ ಮಡಿವೆವು
ಹೂಳಿರೆಂಬುದೆ ಪ್ರಾರ್ಥನೆ
ನಮ್ಮ ಅಂತ್ಯದ ಪ್ರಾರ್ಥನೆ!

–*"ಎಲ್ಲೆನ್" ತೊಂಡೋಟಿ,* ತುಮಕೂರು

ವಿಚಾರ ದೀಪ್ತಿ

ಗಾಂಧೀ ವಿಚಾರ ಅಮರ. ಇದು ಕೇವಲ ಭಾರತಕ್ಕೆ ಮಾತ್ರವಲ್ಲ, ಸಮಸ್ತ ಜಗತ್ತಿಗೆ ಅನ್ವಯವಾಗುತ್ತದೆ. ದೇಶಕಾಲಕ್ಕನುಗುಣವಾಗಿ ಬಾಹ್ಯ ಸ್ವರೂಪದಲ್ಲಿ ಅಲ್ಪಸ್ವಲ್ಪ ಅಂತರವಾದೀತು. ಆದರೆ ಒಳತತ್ವ ಅಮರ. ಆದುದರಿಂದ ಗಾಂಧೀ ವಿಚಾರದ ಬಗೆಗೆ ಚಿಂತೆ ಇಲ್ಲ. ಆದರೆ ಅವರ ಜೊತೆಯಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದವರು ಅವರ ಬೋಧೆಯನ್ನು ಬಹಳ ಬೇಗ ಮರೆತರು ಎಂದು ಯಾರಾದರೂ ಹೇಳಿಯಾರು.

ಇದರ ಕಾರಣಗಳಿಗೂ ಆಳವಾಗಿ ಹೋಗಬೇಕಾದ ಅಗತ್ಯವಿದೆ. ಅಧ್ಯಯನದ ಅಭಾವವೇ ಕಾರಣ. ಗಾಂಧೀ ಜನರು ಕೆಲಸದಲ್ಲಿ ಎಷ್ಟು ಮಗ್ನರಾಗಿರುವರೋ ಅಷ್ಟೂ ವಿಚಾರದ ಆಳಕ್ಕೆ ಇಳಿಯುವುದಿಲ್ಲ. ಇದರಿಂದಲೇ ಮತ್ತೊಂದು ಕಾರಣವೂ ಹೊರಡುತ್ತದೆ. ವಿಚಾರವು ಗಾಂಧೀ ವಿಚಾರವಾಗಿ ಉಳಿಯಿತು, ಅದು ನಮ್ಮ ವಿಚಾರ ಆಗಲಿಲ್ಲ. ಇಡೀ ಗಾಂಧೀ ಜನರಲ್ಲಿ ಉತ್ಸಾಹವಿಲ್ಲ, ಶ್ರದ್ಧೆ ಕಂಡುಬರುವುದಿಲ್ಲ. ಆತ್ಮವಿಶ್ವಾಸ ಗೋಚರವಾಗುವುದಿಲ್ಲ. ಇಂದು ನಾವು ಇದನ್ನು ನೋಡಬಹುದು. ನಾವು ಇಂದು ಮಾಡುತ್ತಾ ಕುಳಿತಿರುವ ಕೆಲಸ ಒಂದು ಅಮರ ವಿಚಾರ ಎಂದು ನಮಗೆ ಅನಿಸುವುದಿಲ್ಲ.

ಒಮ್ಮೆ ಬುದ್ಧಗಯೆಯಲ್ಲಿ ದೇಶದ ಅಗ್ರಗಣ್ಯ ರಚನಾತ್ಮಕ ಕಾರ್ಯಕರ್ತರು ಸೇರಿದ್ದರು. ಅಲ್ಲಿ ಢೇಬರ್ ಭಾಯಿ ನನ್ನೆದುರು ಒಂದು ಪ್ರಶ್ನೆ ಇಟ್ಟರು: "ಗಾಂಧೀಜಿಯ ಕಾಲದಲ್ಲಿ ನಾವು ಆತ್ಮ ವಿಶ್ವಾಸದಿಂದ ಕೆಲಸ ಮಾಡುತ್ತಿದ್ದೆವು. ಆದರೆ ಅಂಥ ಆತ್ಮಶ್ರದ್ಧೆ ಇಂದು ನಮ್ಮಲ್ಲಿಲ್ಲ. ಈ ಕಾರಣದಿಂದ ನಿರಾಶೆಯ ಅನುಭವವಾಗುತ್ತಿದೆ. ಈ ಪ್ರವೃತ್ತಿಯನ್ನು ತಡೆಯುವುದು ಹೇಗೆ?"

ನನ್ನ ಅನುಭವದ ಪ್ರಕಾರ ಈ ಮಾತು ನಿಜ. ಗಾಂಧೀಜಿಯ ಕಾಲದಲ್ಲಿ ನಾವು ಆತ್ಮವಿಶ್ವಾಸದಿಂದಲ್ಲ, ಗಾಂಧೀ ವಿಶ್ವಾಸದಿಂದ ಕೆಲಸಮಾಡುತ್ತಿದ್ದೆವು. ಗಾಂಧೀ ವಿಶ್ವಾಸದ ಬದಲು ನಾವು ಆತ್ಮವಿಶ್ವಾಸದ ಅಗತ್ಯವನ್ನು ಮನಗಾಣಬೇಕೆಂದೇ ಭಗವಂತ ಗಾಂಧೀಜಿಯನ್ನು ನಮ್ಮ ನಡುವಿನಿಂದ ಎತ್ತಿಕೊಂಡು ಹೋಗಿಬಿಟ್ಟ. ಮತ್ತೆ ನಾಲ್ಕೈದು ವರ್ಷ ಗಾಂಧೀಜಿ ಇದ್ದಿದ್ದರೆ ಆ ನಾಲ್ಕೈದು ವರ್ಷವೂ ಆತ್ಮವಿಶ್ವಾಸದ ಅಗತ್ಯ ನಮಗೆ ಅನಿಸುತ್ತಿರಲೇಯಿಲ್ಲ. ಅವರ ಮೇಲಿನ ನಮ್ಮ ಶ್ರದ್ಧೆ ಆಕರ ಗ್ರಂಥದಂತೆ ಕುಳಿತು ಬಿಟ್ಟಿತ್ತು. ಅಂತಲೇ ನಾವು ಅವರ ಹಿಂದೆ ಹಿಂದೆ ಹೋದೆವು. ನಮ್ಮೆಲ್ಲರಲ್ಲೂ ಆಗ ಸ್ವತಂತ್ರ ಆತ್ಮವಿಶ್ವಾಸವಿರಲಿಲ್ಲ ಎಂದೇನೂ ಅಲ್ಲ. ಬಹುತೇಕ ಜನರು ಚಿಂತನವನ್ನೂ ಮಾಡುತ್ತಿರಲಿಲ್ಲ. ಆದುದರಿಂದ ಇದುವರೆಗೆ ನಾವು ಆತ್ಮವಿಶ್ವಾಸಿಗಳಾಗಿರಲಿಲ್ಲ, ಗಾಂಧೀ ವಿಶ್ವಾಸಿಗಳಾಗಿದ್ದೆವು.

ಶ್ರದ್ಧೆಯಿಂದ ಯಾವಾಗಲೂ ಹಾನಿಯಾಗುತ್ತದೆ ಎಂದು ನಾನು ತಿಳಿಯುವುದಿಲ್ಲ. ಅದರಿಂದ ಲಾಭವೂ ಆಗುತ್ತದೆ. ಆದರೆ ಆತ್ಮಶ್ರದ್ಧೆ ಎಂಬುದು ಇದಕ್ಕಿಂತ ಭಿನ್ನ. ಗಾಂಧೀಜಿ ಹೊರಟು ಹೋದ ಮೇಲೆ ಆತ್ಮವಿಶ್ವಾಸದ ಅಗತ್ಯ ಅನುಭವವಾಗುತ್ತಿರುವುದು ಒಂದು ಒಳ್ಳೆಯ ಲಕ್ಷಣ. ಭಗವಂತನೂ ಇದಕ್ಕಾಗಿಯೇ ಗಾಂಧೀಜಿಯನ್ನು ನಮ್ಮಿಂದ ಎತ್ತಿಕೊಂಡು ಹೋಗಿಬಿಟ್ಟ.

– *ವಿನೋಬಾ*

ಎಲ್ಲ ಧರ್ಮೀಯರಿಗೂ ಸನ್ಮತಿ ಕೊಡು ಭಗವಂತ!

- ಸುರೇಂದ್ರ ಕೌಲಗಿ

ಅನ್ಯಮತ ದ್ವೇಷವು ಸ್ವ-ಮತ ದ್ವೇಷವೇ ಆಗಿರುತ್ತದೆ. - ಡಿ.ವಿ.ಜಿ

ಇಂದಿನ ಜಗತ್ತಿನ ಮನುಕುಲವೆಸಗುತ್ತಿರುವ ವಿನಾಶಕಾರಿ ಕೃತ್ಯಗಳನ್ನು ಗಮನಿಸದರೆ ವಿಶ್ವದ ಧರ್ಮಗಳೆಲ್ಲವೂ ಧರ್ಮಭ್ರಷ್ಟವಾಗಿವೆ ಎಂದು ಅನಿಸುತ್ತದೆ! ಧರ್ಮಗಳು ಧರ್ಮಭ್ರಷ್ಟವಾಗುವುದು ಸಾಧ್ಯವಿಲ್ಲ. ಆ ರೀತಿ ಅವು ಧರ್ಮಭ್ರಷ್ಟವಾಗಿವೆ ಎಂದನಿಸುತ್ತಿದ್ದರೆ ಅದಕ್ಕೆ ಕಾರಣ ಆ ಎಲ್ಲ ಧರ್ಮಗಳ ಅನುಯಾಯಿಗಳೇ. ಆ ಧರ್ಮಗಳ ಅನುಯಾಯಿಗಳ ಅಧರ್ಮಾಚರಣೆ ಆ ಧರ್ಮಗಳೇ ಭ್ರಷ್ಟಗೊಂಡಂತೆ ಭಾಸವಾಗುತ್ತದೆ.

ಜಗತ್ತಿನಲ್ಲಿ ಹಿಂದೂ, ಇಸ್ಲಾಂ, ಇಸಾಯಿ, ಸಿಖ್, ಪಾರಸಿಕ, ಜೈನ, ವೇದ, ಬೌದ್ಧ ಇತ್ಯಾದಿ ಮುಖ್ಯ ಧರ್ಮಗಳಿವೆ. ಇವುಗಳಲ್ಲದೆ ಧರ್ಮವೆಂಬ ಹೆಸರು ಪಡೆಯದೆ ಬಗೆಬಗೆಯಲ್ಲಿ ಆಚರಣೆಯಲ್ಲಿರುವ ಹೆಸರಿಲ್ಲದ ಅನೇಕ ಧರ್ಮಗಳಿವೆ. ಕೆಲವು ಧರ್ಮಗಳು ಯಾವುದಾದರು ಅಸಾಧಾರಣ ಪುರುಷನಿಂದ ಸ್ಥಾಪಿಸಲ್ಪಟ್ಟಿದ್ದರೆ ಇನ್ನು ಕೆಲವು ಸಹಜ ಪ್ರಕ್ರಿಯೆಯಲ್ಲಿ ಹುಟ್ಟಿವೆ. ಕೆಲವು ಧರ್ಮಗಳಿಗೆ ಅವುಗಳದೆ ಆದ ಧರ್ಮಾಚರಣೆಯ ಗ್ರಂಥಗಳಿದ್ದರೆ ಇನ್ನು ಕೆಲವು ಅಲಿಖಿತವಾಗಿರುತ್ತವೆ. ಇಷ್ಟೆಲ್ಲ ವಿವಿಧ ಧರ್ಮಗಳಿದ್ದರೂ ಈ ಎಲ್ಲ ಧರ್ಮಗಳ ಮೂಲ ಬೇರು ಮಾನವ ಧರ್ಮವೇ. ಧರ್ಮವೆಂದರೆ ಸಕಲ ಚರಾಚರಗಳನ್ನು ಪ್ರೀತಿಸುವ, ಗೌರವಿಸುವ, ಮನ್ನಿಸುವ ಧರ್ಮ. ಈ ಧರ್ಮಕ್ಕೆ ಅಹಿಂಸೆಯೇ ಜೀವಧಾತು. ಆದರೆ ಇಂದು ಎಲ್ಲ ವಿಶ್ವಧರ್ಮಗಳು ಅಹಿಂಸೆಯ ಬದಲು, ಹಿಂಸೆಯನ್ನು ಆಶ್ರಯಿಸಿವೆ. ತಮ್ಮ ಧಾರ್ಮಿಕ ಕೈಗಳನ್ನು ರಕ್ತದ ಮಡುವಿನಲ್ಲಿ ಅದ್ದಿವೆ. ಎಲ್ಲ ಧರ್ಮಗಳ ಅನುಯಾಯಿಗಳು ತಮ್ಮ ತಮ್ಮ ಧರ್ಮದ ಅಫೀಮು ಸೇವಿಸಿ ತಲೆಕೆಟ್ಟವರಂತೆ ವ್ಯವಹಿಸುತ್ತಿದ್ದಾರೆ. ಇತ್ತೀಚಿಗೆ ನೆರೆ ರಾಷ್ಟ್ರವಾದ ಪಾಕಿಸ್ತಾನದಲ್ಲಿ ಹಿಪಾಮ ಸೀರ್ ಎಂಬ ಕ್ರಿಶ್ಚಿಯನ್ ಬಾಲಕಿಯನ್ನು ಆ ದೇಶದ ಮತ ಇಸ್ಲಾಂಧರ್ಮದ ದೂಷಣೆ ಮಾಡಿದ ಅಪರಾಧಕ್ಕಾಗಿ ಬಂಧಿಸಿದೆ. ಆ ದೇಶದಲ್ಲಿ ಮತದೂಷಣೆ ಕಾನೂನು ಜಾರಿಯಲ್ಲಿದೆ. ಆ ಕನೂನಿನ ಅನ್ವಯ ಯಾರೇ ಇಸ್ಲಾಂ ಬಗ್ಗೆ ಮತ್ತು ದೇವದೂತನ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದಲ್ಲಿ ಮರಣದಂಡನೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಆ ದೇಶದ ಜನಸಂಖ್ಯೆಯಲ್ಲಿ ಕೇವಲ ಶೇ ೪ರಷ್ಟು ಇರುವ ಕ್ರಿಶ್ಚಿಯನ್ನರು ಮತ್ತು ಇತರ ಅಲ್ಪಸಂಖ್ಯಾತ ಹಿಂದೂ ಧರ್ಮೀಯರು ಈ

ಕಾನೂನಿನ ವಿಚಾರದಲ್ಲಿ ಭಯಭೀತರಾಗಿದ್ದಾರೆ. ೨೦೦೯ರಲ್ಲಿ ೪೦ ಮನೆಗಳನ್ನು ಮತ್ತು ಒಂದು ಚರ್ಚನ್ನು ಸುಡಲಾಯಿತು. ಅದೇ ಕಾನೂನಿನ ಅನ್ವಯ ಇಬ್ಬರು ಕ್ರಿಶ್ಚಿಯನ್ನರನ್ನು ಗುಂಡಿಟ್ಟು ಸಾಯಿಸಲಾಯಿತು. ಇತ್ತೀಚೆಗೆ ಅನೇಕ ಹಿಂದೂಗಳು ಅಲ್ಲಿನ ಧಾರ್ಮಿಕ ಕಿರುಕುಳದಿಂದಾಗಿ ಭಾರತಕ್ಕೆ ವಲಸೆ ಬಂದಿದ್ದಾರೆ. ಅವರು ಮರಳಿ ಪಾಕಿಸ್ತಾನಕ್ಕೆ ಹೋಗಲು ನಿರಾಕರಿಸುತ್ತಿದ್ದಾರೆ. ಈ ಎಲ್ಲ ಅಮಾನುಷ ಕೃತ್ಯ ಧರ್ಮಾಂಧತೆಯಿಂದ ನಡೆದುದಾಗಿದೆ. ಇದರಲ್ಲಿ ಇಸ್ಲಾಂ ಧರ್ಮದ ಪಾತ್ರ ಖಂಡಿತ ಇಲ್ಲ. ಕುರಾನ್‌ನಲ್ಲಿ ಎಲ್ಲಿಯೂ ಮಾನವ ಹತ್ಯೆಯ ವಿಷಯವೇ ಪ್ರಸ್ತಾಪಿಸಿಲ್ಲ. ಆ ಧರ್ಮ ಮೂಲತಃ ಕೆಟ್ಟದಾಗಿಲ್ಲ. ಆದರೆ ಆ ಧರ್ಮದ ಅನುಯಾಯಿಗಳು ಧರ್ಮಾಂಧರಾಗಿ ಧರ್ಮಾತೀತರಾಗಿ ವರ್ತಿಸುತ್ತಿದ್ದಾರೆ. ಅಂಥವರಿಂದಾಗಿ ಇಸ್ಲಾಂ ಧರ್ಮಕ್ಕೆ ಕಳಂಕ ಬರುತ್ತದೆ. ಇನ್ನೊಂದು ಇಸ್ಲಾಂ ದೇಶವಾದ ಸಿರಿಯಾದಲ್ಲಿ ಕಳೆದ ಹಲವಾರು ವರ್ಷಗಳಿಂದ ಆಂತರಿಕ ಯುದ್ಧ ನಡೆಯುತ್ತಿದ್ದು ಸಾವಿರಾರು ಜನ ಅಮಾಯಕರು ಸಾಯುತ್ತಿದ್ದಾರೆ. ಅಂತೆಯೇ ಅಫ್ಘಾನ್‌ನಲ್ಲಿ ಕೂಡ ಅಶಾಂತಿ ಹೆಚ್ಚಾಗಿದ್ದು ದಿನ ಬೆಳಗಾದರೆ ಜನರ ಹತ್ಯೆ ಅವ್ಯಾಹತವಾಗಿ ನಡೆದಿದೆ. ಇನ್ನೊಂದು ಇಸ್ಲಾಂ ದೇಶ ಇರಾಕ್‌ನಲ್ಲಿ ಕೂಡ ಅವ್ಯಾಹತವಾಗಿ ಮಾರಣ ಹೋಮ ನಡೆಯುತ್ತಿದೆ. ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳು ೧೭ಜನ ನಾಗರೀಕರ ತಲೆಯನ್ನು ಕತ್ತರಿಸಿದ್ದಾರೆ. ಇವರಲ್ಲಿ ಇಬ್ಬರು ಹೆಣ್ಣು ಮಕ್ಕಳು. ಅವರು ಸಂಗೀತದೊಂದಿಗೆ ಸಂತೋಷ ಕೂಟವನ್ನು ಏರ್ಪಡಿಸಿದ್ದೆ ಇದಕ್ಕೆ ಕಾರಣವಾಯಿತು.

ಇನ್ನೊಂದು ಇಸ್ಲಾಂ ದೇಶವಾದ ಸೂಡಾನ್‌ನಲ್ಲಿ ಕಳೆದ ೨೩ವರ್ಷಗಳಿಂದ ಅವ್ಯಾಹತವಾಗಿ ಆಂತರ್ಯುದ್ಧ ನಡೆಯುತ್ತಿದೆ. ಲಕ್ಷಾಂತರ ಜನರು ಸಾಯಿಸಲ್ಪಟ್ಟಿದ್ದಾರೆ. ಆ ದೇಶದ ಅಧ್ಯಕ್ಷನಾದ ಓಮರ್ ಅಲ್ ಬಷೀರ್‌ನ ಮೇಲೆ ಜನಾಂಗೀಯ ಹತ್ಯೆಗಾಗಿ ಅಂತರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ ಆಪಾದನೆ ಮಾಡಿದೆ. ಅವನ ಸರ್ಕಾರದ ವಿರುದ್ಧ ಅರವತ್ತು ಸಾವಿರಕ್ಕೂ ಹೆಚ್ಚು ಜನ ಬಂಡೆದ್ದಿದ್ದಾರೆ. ಕಳೆದ ಡಿಸೆಂಬರ್ ಮಾಹೆಯಲ್ಲಿ ಸೂಡಾನೀಸ್ ಏರ್‌ಫೋರ್ಸ್ ಅಲ್ಲಿಯ ಜಸ್ಟೀಸ್ ಮತ್ತು ಇಕ್ವಾಲಿಟಿಯ ಸಂಸ್ಥಾಪಕನನ್ನು ಸಾಯಿಸಿತು. ಇದರಿಂದಾಗಿ ಬಷೀರ್‌ನ ಮೇಲೆ ಸೇಡು ತೀರಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ವಿಚಿತ್ರವೆಂದರೆ ಜಸ್ಟೀಸ್ ಮತ್ತು ಇಕ್ವಾಲಿಟಿ ಸಂಘಟನೆ ಆ ದೇಶದ ಇತರ ಜಾತ್ಯತೀತ ಸಂಘಟನೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವಾಗ ಜಾತ್ಯತೀತತೆಯ ತತ್ವವನ್ನು ವಿರೋಧಿಸಿತು. ಅಲ್ಲದೆ ಸುಡಾನ್‌ನ ಎರಡು ಐತಿಹಾಸಿಕ ಪಕ್ಷಗಳಾದ ಉಮ್ಮಾ ಪಕ್ಷ ಮತ್ತು ಪ್ರಜಾತಂತ್ರಿಕ ಯೂನಿಯನ್ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿದ್ದರೂ ಕೂಡ ತರಿಯತ್ ಕಾನೂನನ್ನು ಮತ್ತು ಸೂಡಾನನ್ನು ಇಸ್ಲಾಮಿಕ್ ದೇಶವೆಂದು ಘೋಷಿಸಲು ಸಮರ್ಥಿಸುತ್ತವೆ. ಇದರಿಂದಾಗಿ ಬಷೀರ್‌ರವರು ಪದಚ್ಯುತಗೊಂಡರೂ ಸೂಡಾನಲ್ಲಿ ಆಂತರಿಕ ಕಲಹ ಕೊನೆಗೊಳ್ಳುವ ಯಾವ ಲಕ್ಷಣಗಳೂ ಕಂಡು ಬರುತ್ತಿಲ್ಲ. ಇನ್ನೂ ದೀರ್ಘಕಾಲ ಸೂಡಾನ್ ರಕ್ತಪಾತದ ಮಡುವಿನಲ್ಲಿಯೇ ಉಳಿಯುವ ಸ್ಥಿತಿಯಲ್ಲಿದೆ. ಇದೆಲ್ಲವೂ ಶಾಂತಿ ಪ್ರತಿಪಾದಿಸುವ

ಧರ್ಮ ಇಸ್ಲಾಂ ತತ್ವಕ್ಕೆ ವಿರೋಧವಲ್ಲವೆ?

ಇರಾಕ್ ಅಣುಶಕ್ತಿಯನ್ನು ಶಾಂತಿಕಾರ್ಯಕ್ಕಾಗಿ ಮಾತ್ರ ಉಪಯೋಗಿಸುವುದಾಗಿ ಹೇಳುತ್ತ ತನ್ನಲ್ಲಿಯ ಅಣುಶಕ್ತಿ ವಿಜ್ಞಾನದ ಸಮಾರ್ಥ್ಯವನ್ನು ಅಣುಬಾಂಬ್‌ಗಳಾಗಿ ಪರಿವರ್ತಿಸಲು ಪ್ರಯತ್ನಮಾಡುತ್ತಿದೆ. ಅಲ್ಲದೆ ಆ ದೇಶದ ಶಸ್ತ್ರಾಸ್ತ್ರಗಳು ಭಯೋತ್ಪಾದಕರ ಕೈಸೇರುತ್ತಿವೆ. ಆ ದೇಶದ ಈ ಕಪಟ ನಾಟಕ ಜಗಜ್ಜಾಹಿರವಾಗಿದೆ. ಅಮೇರಿಕಾದ ನೇತೃತ್ವದಲ್ಲಿ ಜಗತ್ತಿನ ಅನೇಕ ದೇಶಗಳು ಇರಾಕ್ ದೇಶಕ್ಕೆ ಬಹಿಷ್ಕಾರ ಹಾಕಲು ಮುಂದಾಗಿವೆ. ಇರಾಕ್ ಮಾಡುತ್ತಿರುವ ಈ ಕಪಟ ನಾಟಕವನ್ನು ಇಸ್ಲಾಂ ಧರ್ಮ ಕಿಂಚಿತ್ತೂ ಸಹಿಸುವುದಿಲ್ಲವೆಂದು ನಿಜಇಸ್ಲಾಮರಿಗೆ ಅನಿಸದೇ ಇರುವುದಿಲ್ಲ. ಇರಾಕ್‌ನಲ್ಲಿ ನಡೆಯುತ್ತಿರುವ ಪ್ರತಿಯೊಂದು ವ್ಯವಹಾರವೂ ಖುರಾನಿನ ಆಶಯಗಳಿಗೆ ವಿರೋಧವಾಗಿದೆ. ಈ ಎಲ್ಲ ಉದಾಹರಣೆಗಳಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಅಮಾನವೀಯ ನೀತಿಗಳಿಗೆ ಹಾಗೂ ಘಟನೆಗಳಿಗೆ ಧರ್ಮ ಎಳ್ಳಷ್ಟೂ ಕಾರಣವಾಗುವುದಿಲ್ಲ. ಅದಕ್ಕೆ ಕಾರಣ ಆ ಧರ್ಮದ ಅನುಯಾಯಿಗಳ ಧಾರ್ಮಿಕ ಮೂರ್ಖತನ. ಧಾರ್ಮಿಕ ಮೂರ್ಖತನಕ್ಕೆ ಇನ್ನೊಂದು ಉದಾಹರಣೆ ಗುಜರಾತ್‌ನ ಗೋಧ್ರಾ, ನರೋಡ, ಪಟಿಯಾಲದಲ್ಲಿ ನಡೆದ ಹತ್ಯಾಕಾಂಡ.

ಇತ್ತೀಚಿಗೆ ೧೭೧ ಹಿಂದೂಗಳು ಧಾರ್ಮಿಕ ಯಾತ್ರೆಗೆಂದು ಧಾರ್ಮಿಕ ವೀಸಾ ಪಡೆದು ಜೋಧ್‌ಪುರಕ್ಕೆ ಪಾಕಿಸ್ತಾನದಿಂದ ಬಂದಿದ್ದರು. ಈಗ ಅವರು ತಮ್ಮ ಪಾಕಿಸ್ತಾನಿ ಪೌರತ್ವವನ್ನು ತ್ಯಜಿಸುವುದಾಗಿ ಮತ್ತು ತಮಗೆ ಭಾರತೀಯ ಪೌರತ್ವ ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ತಮ್ಮ ಆತ್ಮಗೌರವಕ್ಕಾಗಿ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಮತ್ತು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಈ ನಿರ್ಧಾರಕ್ಕೆ ಬಂದಿರುವುದಾಗಿ ಹೇಳುತ್ತಾರೆ. ಪಾಕಿಸ್ತಾನದಿಂದ ಹಿಂದೂಗಳ ವಲಸೆ ಧಾರ್ಮಿಕ ಮತ್ತು ಸಾಮಾಜಿಕ ನಿರ್ಬಂಧದಿಂದ ಆಗುತ್ತಿರುವುದು ಹೊಸದೇನಲ್ಲ. ಆದರೆ ಈ ದೊಡ್ಡ ಪ್ರಮಾಣದ ವಲಸೆ ಭಾರತ ಮತ್ತು ಪಾಕ್ ಗಡಿಯಲ್ಲಿ ತಂತಿ ಬೇಲಿಯನ್ನು ಹಾಕಿದ ಮೇಲೆ ಆಗಿರುವುದು ಗಮನೀಯ. ಇದರ ಅರ್ಥ ಪಾಕಿಸ್ತಾನದಲ್ಲಿ ಹಿಂದೂ ಕುಟುಂಬಗಳಿಗೆ ಸಹಿಸಲಾಗದ ಸಾಮಾಜಿಕ ಪರಿಸ್ಥಿತಿ ಇದೆ. ಅವರ ಪ್ರಕಾರ ತಾವು ಭಾರತಕ್ಕೆ ಗುಳೆ ಹೋಗುವುದಾಗಿ ಸುದ್ದಿಯಾಗಿದ್ದರೆ ನಮಗೆ ಪಾಕಿಸ್ತಾನ ಬಿಡಲು ಕಷ್ಟಸಾಧ್ಯವಾಗುತ್ತಿತ್ತು ಎಂದು ಹಿಂದೂ ಮುಖಂಡ ಚೇತನ್‌ರಾಮ್ ಹೇಳಿದ್ದಾರೆ. ಚೇತನ್‌ರಾಮ್ ಪಾಕಿಸ್ತಾನದ ತಮ್ಮ ಹಳ್ಳಿಯ ಪಂಚಾಯ್ತಿಯ ಅಧ್ಯಕ್ಷರಾಗಿದ್ದಾರೆ. ಹಿಂದೂಗಳ ಈ ವಲಸೆ ಘಟನೆಯನ್ನು ಬರೆಯುವಾಗ ೧೯೪೭ ಆಗಸ್ಟ್ ೧೩ರಂದು ಕರಾಚಿಯಲ್ಲಿ ಪಾಕಿಸ್ತಾನದ ರಚನೆಯ ಹಿಂದಿನ ದಿನ ಪಾಕಿಸ್ತಾನದ ನಿರ್ಮಾತ ಮಹಮದ್ ಅಲಿ ಜಿನ್ನಾ ಅಂದಿನ ವೈಸ್‌ರಾಯ್ ಮೌಂಟ್ ಬ್ಯಾಟನ್‌ರ ಸಮ್ಮುಖದಲ್ಲಿ ಮಾಡಿದ ಭಾಷಣ ಓದಿದ್ದು ನೆನಪಿಗೆ ಬರುತ್ತದೆ. ಅವರು ತಮ್ಮ ಭಾಷಣದಲ್ಲಿ ೧೩ನೇ ಶತಮಾನದಷ್ಟು ಹಳೆಯದಾದ ಇಸ್ಲಾಂ ಪರಧರ್ಮ ಸಹಿಷ್ಣತೆಯ ಪರಂಪರೆಯನ್ನು ಮುಂದುವರಿಸುವುದಾಗಿ, ಅನುಸರಿಸುವುದಾಗಿ

ಮತ್ತು ಆಚರಿಸುವುದಾಗಿ ಹೇಳಿದ್ದರು. ನೆರೆರಾಷ್ಟ್ರಗಳೊಂದಿಗೆ ಹಾಗೂ ಜಗತ್ತಿನ ಎಲ್ಲ ದೇಶಗಳೊಂದಿಗೆ ಸ್ನೇಹಪರ ಭಾವನೆ ಹೊಂದುವುದರಲ್ಲಿ ಪಾಕಿಸ್ತಾನ ಹಿಂದೆ ಬೀಳುವುದಿಲ್ಲವೆಂದು ಹೇಳಿದ್ದರು. ಆದರೆ ಈಗ ಪಾಕಿಸ್ತಾನದಿಂದ ಹಿಂದೂಗಳು ಕ್ರಿಶ್ಚಿಯನ್ನರು ಮತ್ತು ಅಲ್ಪಸಂಖ್ಯಾತರು ಆ ದೇಶದಲ್ಲಿಯ ಪರಧರ್ಮ ಅಸಹಿಷ್ಣುತೆಯ ನೀತಿಯಿಂದಾಗಿ ವಲಸೆ ಬರುತ್ತಿರುವುದನ್ನು ನೋಡಿದರೆ ಜಿನ್ನಾರ ಮಾತು ಎಷ್ಟು ಪೊಳ್ಳಾಯಿತೆಂದು ಗೊತ್ತಾಗುತ್ತದೆ.

೧೯೪೭ರಲ್ಲಿ ಭಾರತ ಇಬ್ಭಾಗವಾದಾಗ ಧರ್ಮಾಂಧತೆ ತನ್ನ ಪರಾಕಾಷ್ಠೆಯನ್ನು ಮುಟ್ಟಿತು. ಜಗತ್ತಿನಲ್ಲಿಯೇ ಈ ಮೊದಲು ಎಂದೂ ಕಾಣದ ಧರ್ಮಾಂಧತೆ ನಗ್ನವಾಗಿ ನರ್ತಿಸಿತು. ಹಿಂದೂ ಮತ್ತು ಇಸ್ಲಾಂ ಧರ್ಮದ ಅನುಯಾಯಿಗಳು ತಮ್ಮ ಧರ್ಮಗಳ ಮೂಲಭೂತ ವಿಚಾರವಾದ ಮಾನವೀಯತೆಯನ್ನು ಮರೆತು ಪರಸ್ಪರ ಪ್ರಾಣ ತೆಗೆಯುವ ಕಾಯಕದಲ್ಲಿ ತೊಡಗಿದರು. ಒಂದು ಮಾಹಿತಿಯ ಪ್ರಕಾರ ೬೦ ಸಾವಿರ ಸ್ತ್ರೀಯರು, ಮಕ್ಕಳು ಮತ್ತು ಪುರುಷರು ಹತ್ಯೆಗೀಡಾದರು. ಈ ಹತ್ಯೆಯಲ್ಲಿ ತೊಡಗಿರುವವರು ಹತ್ಯೆ ಮಾಡುವ ಕಲೆಯಲ್ಲಿ ಪ್ರಯೋಗ ಮಾಡುವಂತಹ ಹುಚ್ಚುತನ ಮತ್ತು ರಾಕ್ಷಸಿ ಪ್ರವೃತ್ತಿಯನ್ನು ತೋರಿಸುತ್ತಿದ್ದರು. ಇದರಲ್ಲಿ ಸ್ತ್ರೀಯರ ಮಾನಾಪಹರಣವು ಸೇರಿತ್ತು. ೧೫ ಕೋಟಿ ಜನರು ತಮ್ಮ ನೆಲೆಗಳಿಂದ ಉಚ್ಚಾಟಿಸಲ್ಪರು. ಮನೆಮಠ ತೊರೆದು ಅಪರಿಚಿತವಾದ ಮತ್ತು ಕಷ್ಟದಾಯಕವಾದ ಹೊಸ ನೆಲೆಯತ್ತ ಸಾಗಿದರು. ಇಂದಿಗೂ ಕೆಲವು ಜನರು ಈ ಹತ್ಯಾಕಾಂಡದ ವಿಚಾರದಲ್ಲಿ ಹಿಂದೂಗಳು ಮತ್ತು ಮುಸಲ್ಮಾನರಲ್ಲಿ ಯಾರು ಹೆಚ್ಚು ಪಶುಗಳಂತೆ ವರ್ತಿಸಿದರು ಎಂಬ ವಿಷಯವನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಾರೆ. ಆದರೆ ಅಂತಹ ಸಂಶೋಧನೆ ತನ್ನ ಮೂಲ ವಿಚಾರದಲ್ಲಯೇ ನಿರರ್ಥಕವಾದುದಾಗಿದೆ. ಎಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಅನಾಥಗೊಂಡರು, ಹತರಾದರು, ಮಹಿಳೆಯರ ಮಾನ ಹೋಯಿತು ಎಂದು ಕೆಲವರು ಲೆಕ್ಕ ಹಾಕಲು ಪ್ರಯತ್ನಿಸುತ್ತಾರೆ. ಆದರೆ ನಡೆದ ಘಟನೆಯಲ್ಲಿ ಮುಖ್ಯವಾದ ಸಂಗತಿ, ಆ ಸಂದರ್ಭದಲ್ಲಿ ಉಂಟಾದ ಮಾನವೀಯ ಕ್ಲೇಶವನ್ನು ಮರೆಯುತ್ತಾರೆ. ಲಕ್ಷಾಂತರ ಹಿಂದೂಗಳು ಮತ್ತು ಮುಸಲ್ಮಾನರು ಅನಾಥರಾದರು, ಕಂಗಾಲಾದರು, ಮನೆಮಠ ತೊರೆದು ಬೀದಿಪಾಲಾದರು. ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಭವಿಷ್ಯದ ಬಗ್ಗೆ ಚಿಂತಿತರಾದರು. ದೇಶವಿಭಜನೆಯಿಂದಾಗಿ ಹತ್ಯೆಯಾದವರ ಮತ್ತು ವಲಸೆಹೋದವರ ಸಂಖ್ಯ ಬಗ್ಗೆ ನಿಖರ ಮಾಹಿತಿಗಳು ಲಭ್ಯವಿಲ್ಲ. ಆದರೆ ೧೦ ಲಕ್ಷ ಜನರು ಈ ಸಂದರ್ಭದಲ್ಲಿ ಹತ್ಯೆಯಾಗಿದ್ದಾರೆ. ಸುಮಾರು ೩ ಕೋಟಿ ಜನ ಮನೆಮಠ ಕಳೆದುಕೊಂಡಿದ್ದಾರೆ.

ಸ್ವಾತಂತ್ರ್ಯದ ನಂತರ ಭಾರತ ತನ್ನ ದೇಶ ಜಾತ್ಯತೀತ ಅಥವಾ ಧರ್ಮಾತೀತವಾದುದೆಂದು ಘೋಷಿಸಿತು. ಅಂದರೆ ಸರ್ಕಾರ ಯಾವ ಧರ್ಮದ ಪರ ವಿರುದ್ಧವಲ್ಲ. ಬದಲಿಗೆ ದೇಶದಲ್ಲಿಯ ಎಲ್ಲ ಧರ್ಮಗಳನ್ನು ಸಮಭಾವದಿಂದ ನೋಡಿಕೊಳ್ಳುವುದೆಂದು ಘೋಷಿಸಿತು. ಪಾಕಿಸ್ತಾನವು ತನ್ನದು

ಇಸ್ಲಾಂ ಧರ್ಮದ ರಾಜ್ಯವೆಂದು ಘೋಷಿಸಿತು. ೧೯೪೭ರ ಹೊತ್ತಿಗೆ ಜಗತ್ತು ವೈಜ್ಞಾನಿಕವಾಗಿ ಮತ್ತು ತಾಂತ್ರಿಕವಾಗಿ ಬಹಳ ಮುಂದುವರಿದು ಜಗತ್ತೆಲ್ಲ ಒಂದು ಗ್ರಾಮ ಎಂಬ ಭಾವನೆ ಮೂಡುತ್ತಿತ್ತು. ಜೈ ಹಿಂದ್, ಜೈ ಪಾಕಿಸ್ತಾನ, ಜೈ ಇಂಗ್ಲೆಂಡ್ ಎಂಬಂತಹ ಘೋಷಣಗಳು ಅರ್ಥವಿಹೀನವಾಗಿ ಜೈ ಜಗತ್ ಎಂಬ ಘೋಷಣೆ ಎಲ್ಲೆಡೆ ಮೊಳಗುವಂತಹ ಕಾಲ ಬಂದಿತ್ತು. ಅಂತಹ ಸಂದರ್ಭದಲ್ಲಿ ಜನಿಸಿದ ಪಾಕಿಸ್ತಾನ ತನ್ನನ್ನು ಇಸ್ಲಾಂ ದೇಶವೆಂದು ಕರೆದು ಕುರಾನಿಗೆ ಬಹುಶಃ ದೊಡ್ಡ ಅವಮಾನವೆಸಗಿತು. ಅದರಂತೆಯೇ ಭಾರತೀಯರು ಕೂಡ ಇತಿಹಾಸದ ಸಾಕ್ಷಿಯಾಗಿ ನಿಂತಿದ್ದ ಬಾಬ್ರಿ ಮಸೀದಿಯನ್ನು ನೆಲಸಮಗೊಳಿಸಲು ಪ್ರಯತ್ನಿಸಿದ್ದು ತಮ್ಮ ಧರ್ಮಾತೀತ ನೀತಿಗೆ ದ್ರೋಹ ಬಗೆದರು. ಬಾಬ್ರಿ ಮಸೀದಿ ಕಟ್ಟಡ ವಿನಾಶದ ಪ್ರಯತ್ನ ಹಿಂದೂಧರ್ಮಕ್ಕೆ ಒಂದು ಕಪ್ಪು ಚುಕ್ಕೆಯಾಗಿಯೇ ಉಳಿಯುತ್ತದೆ. ಏಕೆಂದರೆ ಹಿಂದೂ ಧರ್ಮ ಯಾರನ್ನೂ ಯಾವುದೇ ಕಾರಣಕ್ಕೆ ದ್ವೇಷಿಸಲು ಹೇಳಿಲ್ಲ. ಎಲ್ಲಾ ಜನರು ಸುಖಿಗಳಾಗಿರಲಿ ಎಂದು ಬಯಸಿದೆ. ಅಂಥ ಉದಾತ್ತ ಧರ್ಮೀಯರು ಇನ್ನೊಂದು ಧರ್ಮೀಯರ ಭಾವನೆಗೆ ಏಟುಕೊಡಲು ಪ್ರಯತ್ನಿಸಿದ್ದು ಅಕ್ಷಮ್ಯ ಅಪರಾಧ. ನಂತರದ ಗುಜರಾತಿನ ಗೋಧ್ರಾದಲ್ಲಿ ನಡೆದ ಅಮಾನುಷ ಘಟನೆಯು ಹಿಂದೂ ಧರ್ಮೀಯರು ತಲೆ ತಗ್ಗಿಸುವಂತೆ ಮಾಡಿದೆ.

ಇಷ್ಟೆಲ್ಲಾ ಭೀಕರವಾದ ಧರ್ಮಕರ್ಮಕಾಂಡಗಳ ನಂತರವೂ ಭಾರತ ಮತ್ತು ಪಾಕಿಸ್ತಾನ ಬದ್ಧ ವೈರಿಗಳಂತೆ ವರ್ತಿಸುತ್ತಿರುವುದು ಎರಡು ದೇಶಗಳ ತಮ್ಮ ತಮ್ಮ ಸ್ವಾತಂತ್ರ್ಯೋತ್ತರದ ಘೋಷಣೆಗೆ ವಿರೋಧವಾಗಿದೆ. ಪಾಕಿಸ್ತಾನವನ್ನು ರಚಿಸಲು ಕಾರಣರಾದ ಮಹಮದ್ ಅಲಿ ಜಿನ್ನಾ ದೇಶದ ವಿಭಜನೆಯ ನಂತರದ ಭೀಕರ ಪರಿಣಾಮಗಳನ್ನು ನೋಡಿ ತಾನು ಮಾಡಿದ್ದು ತಪ್ಪಾಯಿತೆಂದು ಪಶ್ಚಾತ್ತಾಪಪಟ್ಟರು. ಹಿಂದೂ ನಾಯಕರಿಗೂ ಈ ಭಾವನೆ ಕಾಡಿತು. ಈ ದೇಶ ಇಬ್ಭಾಗದ ನಂತರ ಉಂಟಾದ ಮತಾಂಧತೆಯನ್ನು ಹೋಗಲಾಡಿಸಿ ಮತಮತಗಳ ನಡುವೆ ಮೈತ್ರಿಯನ್ನು ಸಾಧಿಸಲು ಪ್ರಯತ್ನಿಸಿದ ಮಹಾತ್ಮ ಗಾಂಧೀಯನ್ನೆ ಗುಂಡಿಟ್ಟು ಹಿಂದೂಗಳೇ ಸಾಯಿಸಿದರು. ಇಂತಹ ಅಮಾನುಷ ಮತ್ತು ಮೂರ್ಖತನದ ಭಾವನೆಯಿಂದ ಹೊರ ಬರುವ ಕಾಲ ಇದೀಗ ಬಂದಿದೆ. ಇಲ್ಲವಾದಲ್ಲಿ ಪ್ರಪಂಚದಲ್ಲಿ ಧಾರ್ಮಿಕ ಕಲಹಗಳು ಹೆಚ್ಚಾಗಿ ಮನುಷ್ಯ ಮತ್ತು ಮನುಷ್ಯತ್ವ ನಿರ್ನಾಮವಾಗುವವು.

ಇತ್ತೀಚಿಗೆ ಓರ್ವ ಮೂರ್ಖ ಅಮೇರಿಕನ್, ಮಹಮದ್ ಪೈಗಂಬರ್ ಮತ್ತು ಇಸ್ಲಾಮನ್ನು ಅವಹೇಳನಕಾರಿಯಾಗಿ ಚಿತ್ರಿಸುವ ಚಲನಚಿತ್ರವೊಂದನ್ನು ತಯಾರಿಸಿದ. ಅದರಿಂದಾಗಿ ಕುಪಿತಗೊಂಡ ಮಧ್ಯಪ್ರಾಚ್ಯದ ಮುಸ್ಲಿಂ ಅಧಿಪತ್ಯದ ರಾಷ್ಟ್ರಗಳಲ್ಲಿಯ ಜನ ಅಮೇರಿಕಾ ದೂತವಾಸಗಳ ಮೇಲೆ ದಾಳಿಮಾಡಿರು. ಎಲ್ಲೆಡೆ ಹಿಂಸಾತ್ಮಕ ಪ್ರತಿಭಟನೆಗಳಾದವು. ಇದೇ ರೀತಿ ಹಿಂದೂ ಧರ್ಮದ ದೇವತೆಗಳಿಗೆ ಅವಮಾನವೆಸಗುವ ಕೃತ್ಯಗಳು ಎಸೆಗಿದಾಗ ಹಿಂದೂಗಳು ಸಹ ಪ್ರತಿಭಟನೆ ನಡೆಸಿದರು. ಅದೇ ರೀತಿ ಮೇರಿಗೆ ಅವಮಾನವಾಯಿತೆಂದು ಕ್ರಿಶ್ಚಿಯನ್ನರು ಸಹ

ಪ್ರತಿಭಟನೆ ನಡೆಸಿ ಹಿಂಸಾಚಾರವೆಸಗಿದ್ದಾರೆ. ಸಿಖ್ ಧರ್ಮೀಯರು ಸಹ ತಮ್ಮ ಸ್ವರ್ಣ ಮಂದಿರಕ್ಕೆ ಅವಮಾನವಾಯಿತೆಂದು ದೊಡ್ಡ ದೊಂಬಿ ಮಾಡಿದರಲ್ಲದೆ ಅಂದಿನ ಪ್ರಧಾನಿ ಇಂದಿರಾ ಗಾಂಧೀಯನ್ನೇ ಅವರ ಸಿಖ್ ಅಂಗರಕ್ಷಕ ಗುಂಡಿಟ್ಟು ಸಾಯಿಸಿದ. ದೊಡ್ಡವರ ವಿಗ್ರಹಗಳಿಗೆ ಅವಮಾನವಾಯಿತೆಂದು ಆ ದೊಡ್ಡವರ ಅನುಯಾಯಿಗಳು ಹಿಂಸಾಚಾರಕ್ಕೆ ಇಳಿದದ್ದುಂಟು. ಇದೆಲ್ಲವೂ ಹೇಯ ಘಟನಗಳೇ ಸರಿ. ಏಕೆಂದರೆ ಎಲ್ಲಾ ಧರ್ಮೀಯರು ತಮ್ಮ ತಮ್ಮ ಧರ್ಮಗಳ ಕರ್ಮಕಾಂಡಕ್ಕೆ ಮಹತ್ವ ಕೊಡುತ್ತಿದ್ದಾರೆಯೇ ಹೊರತು ಆ ಧರ್ಮದ ತಿರುಳಿಗಲ್ಲ. ಅಂದರೆ ಕೊಬ್ಬರಿಗೆ ಕೊಡಬೇಕಾದ ಮಹತ್ವವನ್ನು ಕರಟಕ್ಕೆ ಕೊಡುತ್ತಿದ್ದಾರೆ.

ಸಾಮಾನ್ಯವಾಗಿ ಧಾರ್ಮಿಕ ಕಲಹಗಳಿಗೆ ಪರಸ್ಪರರಲ್ಲಿಯ ಭೀತಿಯೇ ಕಾರಣವಾಗಿರುತ್ತದೆ. ಹಿಂದೂಗಳಿಂದ ಮುಸ್ಲಿಮರು ಭೀತರಾಗುತ್ತಾರೆ. ಮುಸ್ಲಿಮರಿಂದ ಹಿಂದೂಗಳು ಭೀತರಾಗುತ್ತಾರೆ. ಇಸಾಯಿಗಳು ಇವರಿಬ್ಬರಿಂದ ಭೀತರಾಗುತ್ತಾರೆ. ಆದರೆ ಈಗ ೨೦ನೇ ಶತಮಾನ ಬಹು ಸಂಸ್ಕತಿಯ ಯುಗವಾಗಿದೆ. ಬಹು ಸಂಸ್ಕೃತಿ ಎಂಬ ವಿಷಯ ಜಗತ್ತಿನಾದ್ಯಂತ ರಾಜಕೀಯ ಚರ್ಚೆಯಾಗಿದೆ. ಆದರೆ ಬಹು ಸಂಸ್ಕೃತಿ ಬಗ್ಗೆ ವಿದ್ವಾಂಸರಲ್ಲಿ ಏಕಭಿಪ್ರಾಯವಿಲ್ಲ. ಸಾಮಾಜಿಕ ವಿಜ್ಞಾನಿಯಾದ 'ಸಾಮ್ಯುಯಲ್ ಪಿ. ಹಟಿಂಗ್‌ಟನ್'ರಂಥವರು ಭವಿಷ್ಯ ನುಡಿಯುತ್ತಾರೆ. "ಬರುವ ವರ್ಷಗಳಲ್ಲಿ ಪಾಶ್ಚಿಮಾತ್ಯ ನಾಗರೀಕತೆ ಮತ್ತು ಇಸ್ಲಾಮಿಕ್ ನಾಗರೀಕತೆಗಳ ಮಧ್ಯ ಘೋರವಾದ ಸಂಘರ್ಷ ನಡೆಯುವುದು" ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಜಗತ್ತಿನ ಎಲ್ಲ ಧರ್ಮಗಳು ಕೇವಲ ವ್ಯಕ್ತಿಪೂಜಿ ಮತ್ತು ಧರ್ಮಾಂಧತೆ ಬೆಳೆಸಿಕೊಂಡಿದ್ದು. ಧರ್ಮಗಳು ಕೇವಲ ವ್ಯಕ್ತಿ ಮತ್ತು ಸಮಾಜದ ಹಿತವನ್ನು ಬಯಸುವ ತಮ್ಮ ಸ್ವಧರ್ಮವನ್ನು ಮರೆತು ರಾಜಕಾರಣದ ಕ್ಷೇತ್ರದಲ್ಲಿ ಪ್ರವೇಶಿಸಿದ್ದು ದುರಂತಕ್ಕೆ ಕಾರಣವಾಗಿದೆ. ಇದಕ್ಕೆ ಇಸ್ಲಾಂಧರ್ಮ, ಹಿಂದೂಧರ್ಮ ಮತ್ತು ಕ್ರಿಶ್ಚಿಯನ್ ಧರ್ಮಗಳು ಉದಾಹರಣೆಗಳಾಗಿವೆ. ಜೈನಧರ್ಮ, ಬೌದ್ಧಧರ್ಮ, ವೇದಧರ್ಮ ಇತ್ಯಾದಿ ಧರ್ಮಗಳು ಕೇವಲ ಲೋಕಹಿತವನ್ನು ಬಯಸುತ್ತಾ ರಾಜಕಾರಣದಿಂದ ದೂರ ಇರುವುದರಿಂದ ತಮ್ಮ ಮೂಲ ಉದ್ದೇಶವನ್ನು ಬಿಟ್ಟು ಕೊಟ್ಟಿಲ್ಲ. ಗಾಂಧೀಯವರು ಬಹು ಸಂಸ್ಕೃತಿಯ ಜೊತೆಗೆ ಸರ್ವಧರ್ಮ ಸಮಭಾವದ ವಿಚಾರವನ್ನು ಜಗತ್ತಿನ ಮುಂದೆ ಇಟ್ಟಿದ್ದಾರೆ.

ಬಹು ಸಂಸ್ಕೃತಿ ಮತ್ತು ಬಹುಧರ್ಮೀಯಸಮಾಜಕ್ಕೆ ಮಿಗಿಲಾದದ್ದು ಸರ್ವಧರ್ಮ ಸಮಭಾವ. ಜಗತ್ತಿನ ಎಲ್ಲ ಧರ್ಮಗಳ ಅನುಯಾಯಿಗಳು ಸರ್ವಧರ್ಮದ ಸಮಭಾವದ ಭಾವನೆಗಳನ್ನು ಬೆಳೆಸಿಕೊಂಡರೆ ಜಗತ್ತಿನ ಎಲ್ಲ ದೇಶಗಳು ಧರ್ಮಾಂಧತೆಯ ಹೋರಾಟದ ಕುರುಕ್ಷೇತ್ರಗಳಾಗದೆ, ಸರ್ವಜನಾಂಗದ ಶಾಂತಿಯ ತೋಟವಾಗುತ್ತವೆ.

ಗಾಂಧೀಜಿಯವರ ಪ್ರಕಾರ ಸರ್ವಧರ್ಮ ಸಮಭಾವ ಆಚರಣೆಯಲ್ಲಿ ಹೇಗಿರುತ್ತದೆ ಎಂಬುದನ್ನು ನೋಡೋಣ. ಸರ್ವಧರ್ಮ ಸಮಭಾವದ ವಿಚಾರ ಜಾತ್ಯತೀತತೆ ಮತ್ತು ಬಹುಸಂಸ್ಕೃತಿಯ ವಿಚಾರವನ್ನು ದಾಟಿ ಮುಂದೆ ಸಾಗುತ್ತದೆ.

ಜಾತ್ಯತೀತತೆಯ ಸಮಸ್ಯೆಯ ಬಗ್ಗೆ ಇರುವ ನಿಲುವು, ಬೇರೆಬೇರೆ ಧರ್ಮಗಳನ್ನು ಸಹಿಸುವ ಉದಾರತೆಯಾಗಿದೆ. ಆದರೆ ಗಾಂಧೀಯವರ ಸರ್ವಧರ್ಮ ಸಮಭಾವ ಎಲ್ಲ ಧರ್ಮಗಳ ಮೂಲದಲ್ಲಿರುವ ಸತ್ಯ ಒಂದೇ. ಅವುಗಳ ದಾರಿಗಳು ಬೇರೆ ಬೇರೆಯಾಗಿರಬಹುದು. ಆದ್ದರಿಂದ ಗಾಂಧೀಜಿಯವರ ಕಲ್ಪನೆ ಕೊನೆಗೆ ಎಲ್ಲಾ ಧರ್ಮಗಳ ಅಂತರಾಷ್ಟ್ರೀಯ ಫೆಲೋಷಿಪ್ ಆಗಿರುತ್ತದೆ. ಗಾಂಧೀಜಿಯವರ ಧರ್ಮದ ದೃಷ್ಟಿಕೋನ ಕೇವಲ ಸಹಿಷ್ಣತೆಯನ್ನು ಪೋಷಿಸುವುದಾಗಿರದೆ, ಓರ್ವ ಹಿಂದೂ ಉತ್ತಮ ಹಿಂದೂ, ಓರ್ವ ಮುಸಲ್ಮಾನ ಉತ್ತಮ ಮುಸಲ್ಮಾನ, ಮತ್ತು ಓರ್ವ ಕ್ರಿಶ್ಚಿಯನ್ ಉತ್ತಮ ಕ್ರಿಶ್ಚಿಯನ್ ಆಗುವಂತೆ ಚೈತನ್ಯವನ್ನು ಅಭಿವೃದ್ಧಿಪಡಿಸುವುದೇ ಆಗಿದೆ. ತಮ್ಮ ಧರ್ಮದ ಬಗ್ಗೆ ಯಾವ ಬಗೆಯ ಗೌರವ ಮತ್ತು ಭಕ್ತಿ ಇರುತ್ತದೊ ಅದೇ ಗೌರವ ಮತ್ತು ಭಕ್ತಿ ಬೇರೆ ಎಲ್ಲ ಧರ್ಮಗಳ ಬಗ್ಗೆಯೂ ಅವರಲ್ಲಿತ್ತು. ಅವರು ಸಕಲ ಧರ್ಮಗಳಲ್ಲಿಯ ಮೂಲಭೂತ ಸಮಾನತೆಯನ್ನು ನಂಬಿದ್ದರು. ಆದರೆ ಆ ಸಮತ್ವವನ್ನು ಒಪ್ಪುವಾಗ ಧರ್ಮ ಮತ್ತು ಅಧರ್ಮವನ್ನು ಬೇರ್ಪಡಿಸುತ್ತಿದ್ದರು. ಗೌರವ ಮತ್ತು ಭಕ್ತಿ ತೋರಿಸುವ ನೆಪದಲ್ಲಿ ಇದ್ದ ಅಧರ್ಮೀಯತೆಯನ್ನು ಸಹಿಸಲು ಅವರು ನಿರಾಕರಿಸುತ್ತಿದ್ದರು. ಇನ್ನೂ ಅನೇಕ ವಿಷಯಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ಹಾಗೆ ಗಾಂಧೀಯವರ ನಿಲುವು ಧಾರ್ಮಿಕ ಬಹುವಿಧತೆ ಮತ್ತು ಜಾತ್ಯತೀತತೆಯ ಆಚೆಗೂ ಸಂಬಂಧಿಸಿದಾಗಿತ್ತು. ಪ್ರಾಥಮಿಕವಾಗಿ ಸತ್ಯವನ್ನು ಪ್ರತಿಪಾದಿಸುವ ಧರ್ಮವನ್ನು ಒತ್ತಿ ಹೇಳುತ್ತಿದ್ದರು. ಅದರಲ್ಲಿ ಅವರು ನಾಸ್ತಿಕರನ್ನು ಮತ್ತು ಮಾನವತಾವಾದಿಗಳನ್ನೂ ಸೇರಿಸಿಕೊಂಡಿದ್ದರು. ನಾಸ್ತಿಕರು ದೇವರನ್ನು ನಂಬುವುದಿಲ್ಲವಷ್ಟೆ, ಸತ್ಯವನಲ್ಲವಲ್ಲ ಎಂಬ ಸಂಗತಿಯೊಂದಿಗೆ ಅವರು ಚಿರಪರಿಚಿತರಾಗಿದ್ದರು. ಆದ್ದರಿಂದ ಗೋಪರಾಜು, ರಾಮಚಂದ್ರರಾವ್ (ಗೋರಾ) ಎಂಬ ನಾಸ್ತಿಕ ಗಾಂಧೀಯವರ ನಿಕಟವರ್ತಿಯಾದರು. ಗೋರಾ ಸ್ವತಃ ಒಮ್ಮ ಹೀಗೆ ಹೇಳಿದರು, "ದೇವರು ಸತ್ಯವಂತ ಎಂದಾದರೆ ನಾನು ಅಂಥ ದೇವರನ್ನು ತೆಗೆದುಹಾಕಲಾರೆ". ಇನ್ನೊಂದು ಸಂದರ್ಭದಲ್ಲಿ ಗೋರಾ ಹೀಗೆ ಹೇಳಿದರು, "ನಾಸ್ತಿಕರು ಸತ್ಯವನ್ನು ಒಂದು ಸಾಮಾಜಿಕ ಅಗತ್ಯವೆಂದು ಭಾವಿಸುತ್ತಾರೆ. ಸತ್ಯ ಒಬ್ಬ ಮನುಷ್ಯನನ್ನು ಇನ್ನೋರ್ವನೊಂದಿಗೆ ಬೆಸೆಯುತ್ತದೆ. ಸತ್ಯವಿಲ್ಲದೆ ಸಾಮಾಜಿಕ ಸಂಸ್ಥೆ ಇರಲಾರದು." ನಾಸ್ತಿಕತೆ ಮಾನವ ಕುಲವನ್ನು ಸುಸಂಸ್ಕೃತವಾಗಿ ಮಾಡುವುದಾದರೆ ನಾಸ್ತಿಕವಾದಕ್ಕೆ ಗಾಂಧೀ ವಿರೋಧವಿರಲಿಲ್ಲವೆಂಬುದು ಗೋರಾರವರಿಗೆ ಗೊತ್ತಿತ್ತು.

ಗಾಂಧೀಜಿಯವರಿಗೆ ಧರ್ಮವು ಅವರ ಜೀವನದ ಮೂಲಭೂತ ಅಂಶವಾಗಿತ್ತು. ಅದು ಅವರ ವಿಚಾರದಲ್ಲಿ ಮತ್ತು ಕೃತಿಯಲ್ಲಿ ಸಮರಸಗೊಂಡಿತ್ತು. ಅವರ ಎಲ್ಲ ಚಟುವಟಿಕೆಗಳು ಆಧ್ಯಾತ್ಮಿಕವಾಗಿರಲಿ, ಸಾಂಸಾರಿಕವಾಗಿರಲಿ, ರಾಜಕಾರಣವನ್ನೂ ಸೇರಿದಂತೆ ಧಾರ್ಮಿಕ ಅಂತಃಸತ್ವದಿಂದ ನಿಯಂತ್ರಿಸಲ್ಪಡುತ್ತಿದ್ದವು. ಧರ್ಮ ಮತ್ತು ರಾಜಕಾರಣದ ಪರಿಭಾಷೆಯಲ್ಲಿಯೇ ಗಾಂಧೀ ಕ್ರಾಂತಿಯನ್ನು ಮಾಡಿದರು. ಆದರೆ ಅವರ ದರ್ಮದ ಕಲ್ಪನೆ ನೈತಿಕವಾದದ್ದು ಮತ್ತು ಯಾವುದೇ

ಪ್ರಕಾರದ ಸಾಂಪ್ರದಾಯಿಕ ರೀತಿ ನೀತಿ ಪೂಜಾ ವಿಧಿಗಳಿಂದ ಮುಕ್ತವಾಗಿತ್ತು. ರಾಜಕಾರಣ ಮತ್ತು ಧರ್ಮದ ಸಂಬಂಧವನ್ನು ಜೋಡಿಸುವ ಸಂದರ್ಭದಲ್ಲಿ ಅವರು ಧರ್ಮಾಧಾರಿತ ಸರ್ಕಾರದ ಬಗ್ಗೆ ಒಲವು ಹೊಂದಿರಲಿಲ್ಲ. ಅಂದರೆ ಒಂದು ಧರ್ಮವನ್ನು ಪ್ರೋತ್ಸಾಹಿಸುತ್ತಾ ಬೇರೆಲ್ಲ ಧರ್ಮಗಳನ್ನು ಸಮಾನವಾಗಿ ಕಾಣುವಂಥ ಸರ್ಕಾರದ ಬಗ್ಗೆ ಒಲವು ಇರಲಿಲ್ಲ. ಗಾಂಧೀಜಿಯವರಿಗೆ ಮತಾಂತರದ ಬಗ್ಗೆಯೂ ಸಹ ಒಲವು ಇರಲಿಲ್ಲ. ಏಕೈಕ ಧರ್ಮವು ಒಂದು ದೇಶವನ್ನು ಮತ್ತು ಪ್ರಪಂಚವನ್ನು ಪ್ರಭಾವಿತಗೊಳಿಸುವುದರ ಅಪಾಯವನ್ನು ಅವರು ಬಲ್ಲವರಾಗಿದ್ದರು. ಪ್ರತಿಯೊಂದು ಧರ್ಮವು ಬೆಲೆಯುಳ್ಳದ್ದಾಗಿದೆ ಮತ್ತು ತನ್ನ ಧರ್ಮದ ಪರಂಪರೆಯನ್ನು ನೆರವೇರಿಸುವುದರಲ್ಲಿ ಆಧ್ಯಾತ್ಮಿಕತೆಯನ್ನು ಅನುಭವಿಸಬೇಕೆಂದು ಅವರು ಹೇಳುತ್ತಿದ್ದರು. ಎಲ್ಲ ಧರ್ಮಗಳ ಭಕ್ತಿಪೂರಕವಾದ ಅಧ್ಯಯನದ ನಂತರ ಗಾಂಧೀ ಈ ಕೆಳಗಿನ ತೀರ್ಮಾನಕ್ಕೆ ಬಂದಿದ್ದರು.

೧. ಎಲ್ಲ ಧರ್ಮಗಳೂ ಸತ್ಯ

೨. ಎಲ್ಲ ಧರ್ಮಗಳಲ್ಲಿ ಕೆಲವು ದೋಷಗಳಿವೆ.

೩. ಎಲ್ಲ ಧರ್ಮಗಳು ನನಗೆ ಹಿಂದೂ ಧರ್ಮದಷ್ಟೆ ಪ್ರಿಯವಾಗಿವೆ. ಯಾವರೀತಿ ಬಂಧುವರ್ಗದವರೊಂದಿಗೆ ಪ್ರೇಮವಿರುತ್ತದೊ ಹಾಗೆ.

ಧರ್ಮಗಳ ನಿಜವಾದ ಜ್ಞಾನ ಎಲ್ಲ ಬಗೆಯ ಸಂಕುಚಿತ ಅಡ್ಡಿಗಳನ್ನು ಮುರಿಯುತ್ತದೆ. ಅಲ್ಲದೆ ತನ್ನ ಸ್ವಂತ ಧರ್ಮವನ್ನು ಚೆನ್ನಾಗಿ ಅರಿಯಲು ಸಹಾಯಕವಾಗುತ್ತೆಂದು ಗಾಂಧೀ ನಂಬಿದ್ದರು. ಗಾಂಧೀ ಎಲ್ಲಾ ಧರ್ಮಗಳ ಏಕೀಭವಿಸುವುದನ್ನು ಸಮರ್ಥಿಸುತ್ತಿರಲಿಲ್ಲ. ಬದಲಿಗೆ ಅವುಗಳಲ್ಲಿ ಇರುವ ಸಮಾನತೆಯ ಅಂಶಗಳನ್ನು ಹುಡುಕಲು ಪ್ರಯತ್ನಿಸುತ್ತಿದ್ದರು. ತನ್ಮೂಲಕ ಪರಸ್ಪರರ ಸಹನೆಯನ್ನು ಬೆಳೆಸಲು ಯೋಚಿಸುತ್ತಿದ್ದರು. ಇಂದಿನ ಕಾಲ ಏಕ ಧರ್ಮದ ಕಾಲವಲ್ಲ. ಪರಸ್ಪರ ಗೌರವಿಸುವ ಮತ್ತು ಸಹಿಸುವ ಕಾಲ. ಆದ್ದರಿಂದ ಜಗತ್ತಿನ ಎಲ್ಲ ಧರ್ಮೀಯರಿಗೂ ಸನ್ಮತಿ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ.

(ರಾಷ್ಟ್ರೀಯ ಐಕ್ಯತೆಯ ತಳಹದಿ ಹಿಂದೂ-ಮುಸ್ಲಿಂ ಐಕ್ಯತೆಯೆಂದು ಆತ್ಮೀಯವಾಗಿ ನಂಬಿದ್ದ ರಫೀಕ್ ಜಕಾರಿಯಾರವರಿಗೆ ಈ ಲೇಖನ ಸಮರ್ಪಿತ.)

* * *

ಸನ್ಮಾನ್ಯರಿಂದ...

ಪತ್ರದೊಂದಿಗೆ ಎರಡು ಸಾವಿರ ರುಪಾಯಿಗಳ ಒಂದು ಸಣ್ಣ ಮೊತ್ತದ ಚೆಕ್ ಕಳುಹಿಸುತ್ತಿದ್ದೇನೆ. ಜನಪದ ಸೇವಾ ಟ್ರಸ್ಟ್ ಸಂಸ್ಥೆ ಉಳಿದು ಸಮರ್ಪಕವಾಗಿ ಕಾರ್ಯನಿರ್ವಹಿಸಲು ನೀವು ಆರೋಗ್ಯದಿಂದಿರುವುದೂ ತುಂಬ ಮುಖ್ಯ. ಇತ್ತೀಚಿಗೆ ನಿಮ್ಮ ಆರೋಗ್ಯ ಅಷ್ಟಾಗಿ ಚೆನ್ನಾಗಿರಲಿಲ್ಲವೆಂದು ತಿಳಿಯಿತು. ಅಲ್ಪಸ್ವಲ್ಪಕ್ಕಾದರೂ ನಿಮ್ಮ ನೆರವಿಗೆ ಬರಬೇಕೆಂಬುದು ನನ್ನ ಆಶಯ.

– ***ನಾಗಮಣಿ ಎಸ್.ರಾವ್,*** ಬೆಂಗಳೂರು

ಸೆಪ್ಟಂಬರ್ ೨೦೧೨ರ ಜನಪದ ವಿಚಾರ ಬಂದಕೂಡಲೆ ಇಡಿಯಾಗಿ ಓದಿದೆ. ನಾನು ಮೊದಲಿಗೆ ಓದುವ 'ಜನಪದ ನಿಲಯದ ಅಂತರಂಗದಲ್ಲಿ' ಓದಿದೆ. ಬೈಲವ್ವ ಭಾಗೀರಥಿಯ ಸಾವು ಕ್ಷಣಕಾಲ ಚಿಂತನೆಗೆ ದೂಡಿತು. ನನ್ನ ಪುಸ್ತಕಗಳನ್ನು ಮುದ್ರಣಮಾಡಿಸಲು ಮೇಲುಕೋಟೆಗೆ ಬರುತ್ತಿದ್ದಾಗ ಜಿಂಕೆಯಂತೆ ಓಡಾಡಿಕೊಂಡಿದ್ದ ಭಾಗೀರಥಿ ಕಣ್ಮುಂದೆ ತೇಲಿಬಂದಳು.

'ಭಾರತವನ್ನು ಪ್ರಪಾತದಿಂದ ಉಳಿಸೋಣ ಬನ್ನಿ' ಲೇಖನದ ವಿಚಾರ ಖುಷಿ ತಂದಿತಾದರೂ ಭಾರತದ ಭವಿಷ್ಯದ ಬಗ್ಗೆ ಭಯ, ಹತಾಶೆ, ಆಡಳಿತಗಾರರ ಬಗ್ಗೆ ಆಕ್ರೋಶವಾಯಿತು. ಆದಿವಾಸಿ ಮಹಿಳೆ ಬುಧ್ನಿ ಮೆಝೂನ್ ಸುದ್ದಿಯಂತಿರುವ ಲೇಖನ ಓದಿ ದಿಙ್ಮೂಢನಾದೆ. ನೆಹರೂ ಕರೆದ ಆಧುನಿಕ ದೇವಾಲಯಗಳಿಂದ ನಿರ್ವಸಿತರಾದವರ ಸಂಖ್ಯೆ ಐದು ಕೋಟಿ ಇದೆ ಎಂದರೆ ಆದಿವಾಸಿ ಮೂಲ ನಿವಾಸಿ ಜನರ ಕಷ್ಟ ಕಾರ್ಪಣ್ಯ ನಿವಾರಣೆ ಆದೀತೆ?

– ***ಅರ್ಜುನಪುರಿ ಅಪ್ಪಾಜಿಗೌಡ,*** ಮದ್ದೂರು

'ಜನಪದ ವಿಚಾರ' ನಿಯಮಿತವಾಗಿ ತಲುಪುತ್ತಿದೆ. ಅದರಲ್ಲಿಯ ಲೇಖನಗಳು ಉತ್ತಮವಾಗಿವೆ.

– ***ವಿಜಯಲಕ್ಷ್ಮಿ,*** ನಂಜನಗೂಡು

'ಭಾರತವನ್ನು ಪ್ರಪಾತದಿಂದ ಉಳಿಸೋಣ ಬನ್ನಿ' ಲೇಖನದಲ್ಲಿ ಭಾರತದ ಇಂದಿನ ಪರಿಸ್ಥಿತಿಯನ್ನು ತುಂಬಾ ಮನಕಲಕುವಂತೆ ವಿವರಿಸಲಾಗಿದೆ. ಇಡೀ ಭಾರತವನ್ನು ವಿಚ್ಛಿದ್ರಕಾರಕ ಶಕ್ತಿಗಳು ನುಂಗಿ ಹಾಕುತ್ತಿವೆ ಎಂದು ನೋಡಿದಾಗ ಹೃದಯ ಕಂಪಿಸುತ್ತದೆ. ಅಂತೂ ನಿಮ್ಮ ಲೇಖನ ಇಂದಿನ ಸಮಸ್ಯೆಗಳನ್ನೆಲ್ಲಾ ವಿಶ್ಲೇಷಿಸಿ ನಮ್ಮ ಕಣ್ಣು ತೆರೆಸಿದೆ.

– ***ಬಿ.ಕೆ.ಶಿವಣ್ಣ,*** ಮೈಸೂರು

ಕೃಷಿಗೆ ಕೈಗಾರಿಕೆ ಮಾದರಿಯಾಗಲಾರದು

– ದೇವೀಂದರ್ ಶರ್ಮಾ

ಬಹು ಉಲ್ಲೇಖಿತ ರಾಜ್ಯಗಳಲ್ಲದೆ ಇದೀಗ ಇತರ ರಾಜ್ಯಗಳಿಂದಲೂ–ಉದಾ: ಒರಿಸ್ಸಾ ರೈತರ ಆತ್ಮಹತ್ಯೆಯ ಸುದ್ದಿ ಬರುತ್ತಿದೆ. ಇದರ ಬಗ್ಗೆ ಏನು ಹೇಳುತ್ತೀರಿ?

ಉತ್ತರ : ರೈತರ ಆತ್ಮ ಹತ್ಯೆ ಕೃಷಿವಲಯದಲ್ಲಿ ಉಂಟಾಗಿರುವ ಸಾರ್ವತ್ರಿಕವಾದ ಬಿಕ್ಕಟ್ಟಿನ ಸಂಕೇತ. ಇದು ಏಕರೂಪಿ ಕೃಷಿ ಪದ್ಧತಿ ಮತ್ತು ತೀವ್ರತರ ಬೇಸಾಯ ಪದ್ಧತಿ ಅಥವಾ ಕೈಗಾರಿಕಾ ಮಾದರಿಯ ಕೃಷಿಪದ್ಧತಿಯ ಪರಿಣಾಮ. ಇದು ದೊಡ್ಡ ಸುದ್ದಿಯಾದದ್ದು ವಿದರ್ಭದಲ್ಲಿ ಕ್ರಿಯಾಶೀಲವಾಗಿದ್ದ ವಿದರ್ಭ ಜನಾಂದೋಲನ ಸಮಿತಿ ಎಂಬ ಸ್ವಯಂ ಸೇವಾ ಸಂಸ್ಥೆಯ ಅಧ್ಯಯನವೊಂದರ ಮೂಲಕ. ಹಾಗಾಗಿ ಬೇರೆ ಪ್ರದೇಶಗಳಲ್ಲೂ ಕೃಷಿ ಪರಿಸ್ಥಿತಿ ಇಷ್ಟೇ ಭೀಕರವಾಗಿದ್ದರೂ ಅಲ್ಲೆಲ್ಲಾ ಕ್ರಿಯಾಶೀಲ ಸೇವಾಸಂಸ್ಥೆಗಳು ಇಲ್ಲದಿರುವುದರಿಂದ ರೈತರ ಆತ್ಮಹತ್ಯೆ ಸುದ್ದಿಯಾಗಿಲ್ಲ; ಆಗುತ್ತಿಲ್ಲ.

ರೈತರ ಆತ್ಮಹತ್ಯೆಯ ಮೂಲ ಕಾರಣವೆಂದರೆ, ನೈಸರ್ಗಿಕ ಸಂಪನ್ಮೂಲಗಳ ನಾಶ. ತೀವ್ರತರ ಅಥವಾ ಸಾಂದ್ರ ಬೇಸಾಯದಿಂದಾಗಿ ಮಣ್ಣು ನಾಶವಾಗಿದೆ ಮತ್ತು ಅಂತರ್ಜಲದ ಮಟ್ಟ ಕುಸಿದು ಹೋಗಿದೆ. ರಸಗೊಬ್ಬರ, ಕೀಟನಾಶಕಗಳ ಬಳಕೆ ವಾತಾವರಣವನ್ನು ಹಾಳು ಮಾಡಿದೆ. ಅನಗತ್ಯವಾದ ತಂತ್ರಜ್ಞಾನದ ಹೇರಿಕೆ ಇದರ ಜೊತೆ ಸೇರಿದೆ. ಕೃಷಿ ಪೋಷಕಗಳ ಬೆಲೆ ಗಗನ ಮುಟ್ಟಿದೆಯಾದರೆ, ಕೃಷಿ ಉತ್ಪನ್ನಗಳ ಬೆಲೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಹಣದುಬ್ಬರವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಹೆಚ್ಚೂ ಕಡಿಮೆ ಸ್ಥಗಿತಗೊಂಡಿದೆ ಎಂದೇ ಹೇಳಬೇಕು. ರೈತರಾದರೂ ಏನು ಮಾಡಿಯಾರು? ನೆಲಕಚ್ಚಿದ ರೈತ ಆತ್ಮಹತ್ಯೆ ಮಾಡಿಕೊಳ್ಳದೆ ಬೇರೆ ದಾರಿಗಾಣದಾಗಿದ್ದಾನೆ.

ಒರಿಸ್ಸಾದ ಬಹಳ ಕಡೆ ಇನ್ನೂ ಸಾಂಪ್ರದಾಯಿಕ ಸುಸ್ಥಿರ ಬೇಸಾಯವೇ ಚಾಲ್ತಿಯಲ್ಲಿದ್ದು 'ಹಸಿರು ಕ್ರಾಂತಿ' ಜಾರಿಗೆ ತಂದ ಸಾಂದ್ರ ಬೇಸಾಯಕ್ಕೆ ರೈತರು ಅಷ್ಟಾಗಿ ಒಲವು ತೋರಿಲ್ಲ. ಈಗ ಕೃಷಿ ವಾಣಿಜ್ಯೋದ್ಯಮ ರಾಜ್ಯವನ್ನು ಪ್ರವೇಶಿಸುತ್ತಿರುವುದರಿಂದಾಗಿ ಇಲ್ಲಿಂದಲೂ ಆತ್ಮಹತ್ಯೆಗಳ ಸುದ್ದಿ ಬರತೊಡಗಿದೆಯಷ್ಟೆ.

ಈ ತೀವ್ರತರ ಬೇಸಾಯ ಅಥವಾ ಕೈಗಾರಿಕಾ ಬೇಸಾಯ ಮಾದರಿ ಎಂದರೇನೆಂದು ಸ್ವಲ್ಪ ವಿವರಿಸುವಿರಾ?

ಮಣ್ಣು ಸಾವಯವ (ಸೂಕ್ಷ್ಮ ಜೈವಿಕ) ವಸ್ತುವಿನಿಂದೊಡಗೂಡಿರುತ್ತದೆ. ನಮ್ಮ ಪ್ರಯತ್ನವೇನಿದ್ದರೂ ಈ ಸಾವಯವ ವಸ್ತು ಸಸ್ಯಗಳನ್ನು ಪ್ರವೇಶಿಸುವಂತೆ

ನೋಡಿಕೊಳ್ಳುವುದಷ್ಟೆ. ಕೈಗಾರಿಕಾ ಕೃಷಿ ಮಾದರಿಯಡಿ ತೀವ್ರವಾಗಿ ಪ್ರೋತ್ಸಾಹಿಸಲಾಗುತ್ತಿರುವ ರಸಾಯನಿಕ ಗೊಬ್ಬರ, ಕೀಟನಾಶಕ ಮತ್ತು ಮಿಶ್ರತಳಿ ಬೀಜಗಳ ಬಳಕೆ ಮಣ್ಣಿನಲ್ಲಿ ಸಾವಯತೆ ಶೇ.೨ರಷ್ಟಾದರೂ ಇರಬೇಕು. ನಾಲ್ಕರಷ್ಟು ಇದ್ದರೆ ಇನ್ನೂ ಚೆನ್ನ. ಆದರೆ ಇಂದು ಪಂಜಾಬ್‌ನ ಮಣ್ಣಿನಲ್ಲಿ ಅದು ಶೇ.೦೧ರಿಂದ ೦.೨ರಷ್ಟಕ್ಕೆ ಇಳಿದಿದೆ. ಈ ಕಾರಣದಿಂದಾಗಿಯೇ ಅಲ್ಲಿನ ರೈತ ಇಂದು ಹತ್ತು ವರ್ಷಗಳ ಹಿಂದೆ ಬಳಸುತ್ತಿದ್ದ ರಸಗೊಬ್ಬರವನ್ನು ಅಷ್ಟೇ ಬೆಳೆ ಬೆಳೆಯಲು ದುಪ್ಪಟ್ಟು ಪ್ರಮಾಣದಲ್ಲಿ ಬಳಸುತ್ತಿದ್ದಾನೆ. ಅಲ್ಲಿ ಮಣ್ಣು ಉಸಿರಾಡಲು ಕಷ್ಟಪಡುತ್ತಿದೆ ಇಂದಿನ ತುರ್ತು ಅಗತ್ಯವೆಂದರೆ ಮಣ್ಣನ್ನು ಪುನರುಜ್ಜೀವನಗೊಳಿಸುವುದೇ ಆಗಿದೆ.

ಇದೇ ಪರಿಣಾಮ ಕೀಟನಾಶಕಗಳಿಂದಲೂ ಆಗಿದೆ. ಇವು ಪರಿಸರ ಮತ್ತು ಜೀವ ಜಗತ್ತಿನ ಆಧಾರವಾಗಿರುವ ಆಹಾರ ಸರಪಳಿಯನ್ನೇ ನಾಶಮಾಡಿವೆ. ಈ ಎಲ್ಲ ಅನಾಹುತಕ್ಕೆ ಕಾರಣ ನಾವು ಇವುಗಳಿಗೆ ಪ್ರತಿಸ್ಪಂದಿಸುತ್ತಿದ್ದ ಅಧಿಕ ಇಳುವರಿಯ ಮತ್ತು ಮಿಶ್ರ ತಳಿಯ ಬೀಜಗಳನ್ನು ಅಭಿವೃದ್ಧಿಪಡಿಸತೊಡಗಿದ್ದು. ಈ ತಳಿಗಳು ರಾಕ್ಷಸ ಪ್ರಮಾಣದ ನೀರು ಕುಡುಕರೂ ಹೌದು. ಉದಾಹರಣೆಗೆ ಹೇಳುವುದಾದರೆ, ಅಧಿಕ ಇಳುವರಿಯ ಭತ್ತದ ತಳಿ ಒಂದು ಕಿಲೋ ಅಕ್ಕಿ ಕೊಡಲು ಮೂರು ಸಾವಿರ ಲೀ. ನೀರು ಕುಡಿಯುತ್ತದೆ. ಇನ್ನು ಮಿಶ್ರ ತಳಿಗೆ ಏಳರಿಂದ ಏಳೂವರೆ ಸಾವಿರ ಲೀ. ಬೇಕಾಗುತ್ತದೆ! ಜೊತೆಗೆ ಮಿಶ್ರ ತಳಿ ಬೀಜಗಳನ್ನು ಅವುಗಳ ಆಂತರಿಕ ಗುಣದಿಂದಾಗಿಯೇ ಪ್ರತಿ ವರ್ಷ ರೈತ ಹೊಸದಾಗಿಯೇ ಕೊಂಡು ಬಳಸಬೇಕು. ಈ ತಳಿ ಈವರೆಗೆ ಶೇ ೩ರಷ್ಟು ಪ್ರದೇಶದಲ್ಲಿ ಮಾತ್ರ ಬಿತ್ತಲ್ಪಡುತ್ತಿತ್ತಾದರೂ, ಈಗ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಇದನ್ನು ತೀವ್ರವಾಗಿ ಪ್ರೋತ್ಸಾಹಿಸಲಾಗುತ್ತಿದ್ದು, ಇದು ಯಶಸ್ವಿಯಾದಲ್ಲಿ ನೀರಿನ ಗಣಿಗಾರಿಕೆಯೇ ಒಂದು ಬೃಹತ್ ಉದ್ಯಮವಾಗಿ ಬೆಳೆದು ದೇಶದಲ್ಲಿ ಬರ ಶಾಶ್ವತ ಲಕ್ಷಣವಾಗಿ ಕಾಣಿಸಿಕೊಂಡರೆ ಆಶ್ಚರ್ಯವಿಲ್ಲ.

ರೈತರ ಆತ್ಮಹತ್ಯೆ ಸೂಚಿಸುವ ಕೃಷಿ ವ್ಯವಸ್ಥೆ ಬಿಕ್ಕಟ್ಟಿಗೂ ಸಣ್ಣ ಸಾಲ ವ್ಯವಸ್ಥೆಗೂ ಸಂಬಂಧವಿದ್ದಂತಿದೆಯಲ್ಲವೇ?

ನಮ್ಮ ದೇಶದಲ್ಲಿ ಪರಿಹಾರವೇ ಸಮಸ್ಯೆಯಾಗುವುದಕ್ಕೆ ಇದೊಂದು ನಿದರ್ಶನ. ವಿಶೇಷವಾಗಿ ರೈತರಿಗೆ ಸಹಾಯವಾಗಲೆಂದೇ ರೂಪಿಸಲಾದ ಸಣ್ಣ ಸಾಲಗಳ ಸಂಸ್ಥೆಗಳು ಕೊಲೆಗಡುಕವಾಗಿವೆ. ಅಗ್ಗದ ಬಡ್ಡಿದರದಲ್ಲಿ ಬಡವರು ಹತ್ತು ಸಾವಿರ ರೂಪಾಯಿಗಳವರೆಗೆ ಅಲ್ಪಾವಧಿ ಸಾಲ ಪಡೆದು ತಮ್ಮ ಸಣ್ಣಪುಟ್ಟ ಸಮಸ್ಯೆಗಳನ್ನು ನೀಗಿಸಿಕೊಳ್ಳಲೆಂಬ ಸದುದ್ದೇಶದಿಂದ ಸ್ಥಾಪಿತವಾದ ಈ ಸಂಸ್ಥೆಗಳು ಇಂದು ವಾರದ ಬಡ್ಡಿ ಲೆಕ್ಕದಲ್ಲಿ ವಾರ್ಷಿಕ ಶೇ. ೨೪ರಷ್ಟು ಬಡ್ಡಿ ವಸೂಲು ಮಾಡುತ್ತಿವೆ. ನಗರಗಳಲ್ಲಿ ನಾವು ಶೇ.೬ರಿಂದ ೭ರ ದರದಲ್ಲಿ ಕಾರ್ ಸಾಲ. ಶೇ. ೮ರ ದರದಲ್ಲಿ ಇಪ್ಪತ್ತು ಲಕ್ಷ ರೂಪಾಯಿಗಳವರೆಗೆ ಮನೆಸಾಲ ಪಡೆಯಬಹುದಾದರೆ, ರೈತರಿಗೆ, ಬಡವರಿಗೇಕೆ ಈ ದುಬಾರಿ ಬಡ್ಡಿ ದರ? ರಿಸರ್ವ್ ಬ್ಯಾಂಕ್ ಇವನ್ನು

ಮುಚ್ಚಬಹುದು; ಕೂಡಲೇ ಮುಚ್ಚಬೇಕು. ರೈತರಿಗೆ ಶೇ. ೩ರ(ಕೆಲವು ರಾಜ್ಯಗಳಲ್ಲಿ ಶೇ.೧ರ) ಬಡ್ಡಿ ದರದಲ್ಲಿ ಸಹಕಾರಿ ಸಾಲ ನೀಡಲು ಅವಕಾಶವಿರುವುದಾದರೆ ಸ್ವಯಂಸಹಾಯ ಸಂಘಗಳಿಗೇಕೆ ಇದೇ ಮಾನದಂಡ ಅನುಸರಿಸಿ ಹಣ ಬಿಡುಗಡೆ ಮಾಡಬಾರದು?

ನಮ್ಮ ದೇಶದಲ್ಲಿ ಕೈಗಾರಿಕೆ ಮತ್ತು ಕೃಷಿ ವಲಯಗಳ ನಡುವಣ ನೀರು ಹಂಚಿಕೆಯ ಜಗಳದ ಸಾಧ್ಯತೆ ಎಷ್ಟು ನಿಜವಾದದ್ದು? ಎರಡು ವಲಯಗಳಿಗೂ ಪೂರೈಸುವಷ್ಟು ನೀರು ನಮ್ಮಲ್ಲದೆಯೇ?

ಈಗ ವಿಶೇಷವಾಗಿ ಗುಜರಾತ್, ಆಂಧ್ರ ಮತ್ತು ಪಂಜಾಬ್‌ಗಳಲ್ಲಿ ಈ ಜಗಳ ಬಹು ವ್ಯಾಪಕವಾಗಿ ಹಬ್ಬುತ್ತಿದೆ. ಒರಿಸ್ಸಾಕ್ಕೆ ಖಾಸಗಿ ಕಂಪನಿಗಳು ದೊಡ್ಡ ರೀತಿಯಲ್ಲಿ ಪ್ರವೇಶಿಸುತ್ತಿದ್ದು. ಅವು ಜನ ಸಮುದಾಯಗಳು ಬಳಸುತ್ತಿರುವ ನೀರನ್ನು ತಮ್ಮೆಡೆಗೆ ತಿರುಗಿಸಿಕೊಳ್ಳಲಿವೆ. ಈ ಕಂಪನಿಗಳು ಬಹುತೇಕ ಏಷ್ಯಾ ದೇಶಗಳ ಮೂಲ ಹೊಂದಿದ್ದು ತಮ್ಮ ದೇಶಗಳಲ್ಲಿ ಉಂಟಾಗುರುವ ಭೀಕರ ಜಲಕ್ಷಾಮದಿಂದಾಗಿ ಕಾರ್ಖಾನೆಗಳನ್ನು ಸ್ಥಾಪಿಸಲು ಇಲ್ಲಿಗೆ ಬರುತ್ತಿವೆ. ಉದಾಹರಣೆಗೆ ಬೃಹತ್ ಪ್ರಮಾಣದಲ್ಲಿ ನೀರನ್ನು ಬಳಸುವ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಬಂದಿರುವ ಪೋಸ್ಕೋ(ಇದು ಕರ್ನಾಟಕದ ಮೇಲೂ ಕಣ್ಣಿಟ್ಟಿದೆ!)ದ ಮೂಲ ದೇಶವಾದ ದಕ್ಷಿಣ ಕೊರಿಯಾದಲ್ಲಿ ನೀರಿನ ಭೀಕರ ಬರವಿದ್ದು ಅದು ಅಂತರ್ಜಲ ಸಂರಕ್ಷಣೆಗಾಗಿ ಭೂಗರ್ಭದಲ್ಲಿ ಅಣೆಕಟ್ಟುಗಳನ್ನು ನಿರ್ಮಿಸುವ ಸ್ಥಿತಿ ತಲುಪಿದೆ. ಅಲ್ಲಿನ ಸರ್ಕಾರ ಈ ಕಂಪನಿಗಳಿಗೆ ನೀರು ಒದಗಿಸಿದರೆ, ತನ್ನ ಜನರ ಸಾಮಾನ್ಯ ಬಳಕೆಗೆ ನೀರು ಒದಗಿಸಲಾಗದ ಸ್ಥಿತಿ ತಲುಪುತ್ತದೆ. ಹಾಗಾಗಿಯೇ ದಕ್ಷಿಣ ಕೊರಿಯಾ ಉಕ್ಕು ಮತ್ತು ಕಾರು ತಯಾರಿಕಾ ಸ್ಥಾವರಗಳನ್ನು ದೇಶದ ಹೊರಗೆ ಸ್ಥಾಪಿಸಲು ಅವಕಾಶ ನೀಡುತ್ತಿದೆ. ನಾವಾದರೋ ನೇರ ವಿದೇಶಿ ಹೂಡಿಕೆಯ ಆಮಿಷಕ್ಕೆ ಬಿದ್ದು ಇವುಗಳನ್ನು ಒಳ ಬಿಟ್ಟುಕೊಳ್ಳುತ್ತಿದ್ದೇವೆ. ನಾವು ಇದರಿಂದುಂಟಾಗುವ ಪರಿಸರ ನಾಶಕ್ಕೆ ತೆರಬೇಕಾದ ಬೆಲೆ ಏನು, ಎಷ್ಟು ಎಂಬುದನ್ನು ಇನ್ನೂ ಮನಗಂಡಿಲ್ಲ. ಮನಗಾಣುವ ವೇಳೆಗೆ ತುಂಬಾ ತಡವಾಗಿದ್ದರೂ ಆಶ್ಚರ್ಯವಿಲ್ಲ. (ಕನ್ನಡಕ್ಕೆ: ಡಿಎಸ್ಸೆನ್)

(ಸಾಭಾರ : ನವಮಾನವ)

* * *

ಎಚ್ಚರಿಕೆಯ ಗಂಟೆ

- ಅಕ್ಬರ್ ಅಯೂಬ್: ಕನ್ನಡಕ್ಕೆ-ಸು.ಕೌ

ಸಮಕಾಲೀನ ಜಗತ್ತು ಸುಖ, ಸಂತೋಷ, ಸಾಧನ ಮತ್ತು ಶ್ರೀಮಂತಿಕೆ ಎಂಬುವುಗಳೇ ಜೀವನದ ಪರಮಗುರಿ ಎಂಬ ತತ್ವದಿಂದ ಸಂಚಾಲಿತವಾಗಿದೆ. ಭೌತಿಕ ಪ್ರಗತಿ ಬಹಳ ಹಿಂಚಿನ ಕಾಲದಿಂದಲೂ ನಮ್ಮ ಮೌಲ್ಯವ್ಯವಸ್ಥೆಯನ್ನು ದಿಗ್ದರ್ಶನ ಮಾಡಿದೆ. ಈ ವ್ಯವಸ್ಥೆಯ ಪ್ರವರ್ತಕರು ನಮ್ಮ ಸಾಮೂಹಿಕ ಚಿಂತನಾ ಶಕ್ತಿಯ ಮೇಲೆ ಬಲವಾದ ಹಿಡಿತವನ್ನು ಜಗತ್ತಿನಾದ್ಯಂತ ಸಾಧಿಸಿದ್ದಾರೆ. ಆದಾಗ್ಯೂ ಋಷಿಗಳು, ಮುನಿಗಳು, ಸಂತರು, ದೇವದೂತರು, ಚಿಂತಕರ ಅಭಿಪ್ರಾಯದಲ್ಲಿ ಭೌತಿಕ ಸುಖ ಅಶಾಶ್ವತ ಪ್ರಭಾವಳಿಯನ್ನು ಹೊಂದಿದೆ. ಇಂದಲ್ಲ ನಾಳೆ ಅನೀರಿಕ್ಷಿತವಾದುದು ಸಂಭವಿಸಿ ಜಗತ್ತಿನಾದ್ಯಂತ ಇರುವ ಈ ಗ್ರಹಿಕೆ ಬದಲಾಗಬಹುದು ಎಂದು ತಿಳಿದಿದ್ದಾರೆ.

೨೧ನೇ ಶತಮಾನದ ಪ್ರಾರಂಭದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾಗಿ ಆರ್ಥಿಕ ಹಿಂಜರಿತ ಪ್ರಾರಂಭವಾಯಿತು. ಅದು ಗತಕಾಲದ ಬಂಡವಾಳ ಶಾಹಿಯಲ್ಲಿ ಅಂತಃನಿರ್ಹಿತವಾಗಿದ್ದ ಬದ್ಧತೆಯನ್ನು ಪ್ರಶ್ನಿಸಲಾರಂಭಿಸಿತು. ಮತ್ತು ತಳಪಾಯದವರೆಗಿನ ಅದರ ಬೇರನ್ನೂ ಅಲುಗಾಡಿಸಿತು. ಜನತೆ ಯೋಚನೆ ಮಾಡುವಂತೆ ಮಾಡಿತು. ಭೌತಿಕ ಸಾಧನಗಳು ಮತ್ತು ವಸ್ತು ವಿಶೇಷಗಳ ವೈಭವದ ಆಚೆಗೆ ನಿಜವಾಗಿಯೂ ಏನಾದರೂ ಇದೆಯೇ ಎಂದು ಯೋಚಿಸಲಾರಂಭಿಸಿತು. ಭೌತಿಕವಾದ ಜೀವನದ ಆಳದಲ್ಲಿರುವ ರಹಸ್ಯವನ್ನು ಮಾನವಕುಲ ತಿಳಿಯಲು ಎಂದಾದರೂ ಸಹಾಯ ಮಾಡಬಹುದೆ? ವಸ್ತುತಃ ಇಂಥ ಪ್ರಶ್ನೆ ಕಾಲಾಂತರದಿಂದ ವಿಶ್ವದಾದ್ಯಂತ, ದೇಶಾದ್ಯಂತ ಅಸಂಖ್ಯಾತ ಮನಗಳಲ್ಲಿ ಹರಿದಾಡುತ್ತಿವೆ. ಇದು ಇತ್ತೀಚಿಗಿನ ಆರ್ಥಿಕ ಹಿಂಜರಿತದ ಜಗತ್ತನ್ನು ಬಿಗಿಹಿಡಿಯುವುದ್ದಕ್ಕೆ ಮುನ್ನವೇ ಪ್ರಾರಂಭವಾಗಿತ್ತು. ಆದರೆ ಆ ಪ್ರಶ್ನೆಗೆ ಉತ್ತರ ಪಡೆಯುವುದ್ದಕ್ಕೆ ಮೊದಲು ಮಾನವಕುಲ ತನ್ನ ಗಾಢವಾದ ನಿದ್ರೆಯಿಂದ ಎಚ್ಚತ್ತುಕೊಳ್ಳಬೇಕು. ಏಕೆಂದರೆ ಜೀವನದ ನಗ್ನ ಸತ್ಯಗಳು ನಮ್ಮ ಎದುರಿಗಿದ್ದು ನಮ್ಮನ್ನು ದಿಟ್ಟಿಸಿ ಬಹಳಕಾಲದಿಂದ ನೋಡುತ್ತಿದ್ದರೂ ನಾವು ನಿದ್ರಾವಸ್ಥೆಯಲ್ಲೇ ಜೀವನ ಸಾಗಿಸುತ್ತಿದ್ದೇವೆ. ಈಗ ನಾವು ನಮ್ಮ ಬ್ರಾಂತಿಯಿಂದ ಎಚ್ಚೆತ್ತು ಕೊಳ್ಳಬೇಕಾದ ಮತ್ತು ಕಣ್ಣಕಟ್ಟನ್ನು ತೆಗೆಯಬೇಕಾದ, ನಗ್ನ ಸತ್ಯಗಳ ಕಡೆ ನೋಡಬೇಕಾದ ಸಮಯ ಬಂದಿದೆ ಎಂದನಿಸುತ್ತದೆ.

ನಾವು ನಮ್ಮ ಜೀವನದ ಅತಿ ಸಾಧಾರಣ ಕ್ಷೇತ್ರಗಳಿಂದ ಪ್ರಾರಂಭಿಸೋಣ. ಏಕೆಂದರೆ ಅಲ್ಲಿ ನಾವು ನಮ್ಮ ಜೀವನದ ಅತಿಶಯವಾದ ಅಸಾಮಾಜಿಕ ಜೀವನ ಮತ್ತು ಅವ್ಯವಸ್ಥೆಯನ್ನು ಕಾಣುತ್ತೇವೆ. ಇಂಥ ಕ್ಷೇತ್ರದಲ್ಲಿಯ ಯಾವುದೇ

ವಿಷಯ ತೆಗೆದುಕೊಳ್ಳಿ, ಅಲ್ಲಿ ನಾವು ಕಾಣುವುದು ಘನೀಭೂತಭ್ರಮೆ. ಇನ್ನು ಸಹಜವಲ್ಲದ ಕ್ಷೇತ್ರವನ್ನು ಗಮನಿಸೋಣ. ಆ ಕ್ಷೇತ್ರ ಜಾಹಿರಾತಿನದು. ಆ ಕ್ಷೇತ್ರದಲ್ಲಿ ಕಾಣುವಷ್ಟು ನಮ್ಮ ಅಸಾಮಾಜಿಕ ಜೀವನ ಕಣ್ಣಿಗೆ ರಾಚುವಷ್ಟು ಬೇರೆಲ್ಲೂ ಸಿಗುವುದಿಲ್ಲ. ಪ್ರತಿಲಿಪಿಯನ್ನು ತಯಾರಿಸುವಂಥವರಿಗೆ ಮಾನವ ಪ್ರಭಾವ ಆತ್ಯಂತೀಕವಾಗಿ ಗೊತ್ತಿದೆ. ಮಾನವ ಸ್ವಭಾವ ಬದಲಾಗುವುದಿಲ್ಲವೆಂದು ಅವರು ನಂಬಿದ್ದಾರೆ. ಅದೇ ಆಸೆ ಅದೇ ತೋರಿಕೆಯಿಂದ ಜನ ಮರಳಾಗುತ್ತಾ ಹೋಗುತ್ತಾರೆ, ಏಕೆ? ಏಕೆಂದರೆ ವಿಚಾರಗಳು ಆಸೆಯೊಂದಿಗೆ ಸೇರಿಕೊಂಡಿವೆ ನೀವು ಯಾವುದಾದರೊಂದು ಪದಾರ್ಥ ಖರೀದಿಸಿ ಮತ್ತು ಒಂದು ವಿಶಿಷ್ಟವಾದ ಉತ್ಪಾದನೆಯನ್ನು ಉಪಯೋಗಿಸಿದರೆ ಆ ಪದಾರ್ಥವನ್ನು ಮೆಚ್ಚುವ ಓರ್ವ ಜನಪ್ರಿಯ ವ್ಯಕ್ತಿಯಂತೆ ಆಗುತ್ತೀರಿ ಇದು ಆಕರ್ಷಣೆ! ಏಕೆಂದರೆ ಆ ಜನಪ್ರಿಯವ್ಯಕ್ತಿ ನಿಮ್ಮೊಂದಿಗೆ ಹೋಲಿಸಿದಾಗ ಪ್ರತಿಯೊಂದನ್ನು ಹೆಚ್ಚಾಗಿ ಹೊಂದಿದ್ದಾನೆ. ಹೆಚ್ಚು ವೈಭವ, ಹೆಚ್ಚು ಶ್ರೀಮಂತಿಕೆ, ಹೆಚ್ಚಿನಸ್ಥಾನ, ಹೆಚ್ಚು ಅಧಿಕಾರ, ಮೂಲಮಂತ್ರ ಹೆಚ್ಚು ಜಾಹೀರಾತು. ಪ್ರತಿಲಿಪಿಕಾರರು ಎಂದೂ ಇಂಗದ ಅತಿಲಾಲಸೆ, ಸ್ವ ಪ್ರತಿಷ್ಠೆಯನ್ನು ಬಂಡವಾಳವಾಗಿ ಇರಿಸಿಕೊಳ್ಳುತ್ತಾರೆ. ಸದಾಕಾಲ ಹೆಚ್ಚು ಬೇಕೆಂಬ ಇಚ್ಛೆ.

ಈಗ ನಾವು ವಿಷಯದ ಮೂಲಕ್ಕೆ ಬರುತ್ತೇವೆ. ಮನುಷ್ಯನ ಆತ್ಮ ಪೂರ್ಣವಾಗಿದೆ, ಪರಿಪೂರ್ಣವಾಗಿದೆ ಮತ್ತು ಇಡಿಯಾಗಿದೆ ಇನ್ನೂ ಹೆಚ್ಚು ಪರಿಪೂರ್ಣವಾಗುವುದ್ದಕ್ಕೆ ಇನ್ನೇನು ಬೇಕಾಗಿಲ್ಲ. ವಸ್ತುತಹಃ ಹೆಚ್ಚು ಬೇಕೆಂದು ಹುಡುಕುವುದು ತಾನು ಅಪೂರ್ಣವೆಂಬ ಗ್ರಹಿಕೆಯಾಗಿದೆ. ಅಂದರೆ ಯಾವುದು ಈಗ ನಮ್ಮ ಬಳಿ ಇಲ್ಲವೋ ಅದನ್ನು ಹುಡುಕುವುದೆಂದೇ ಅರ್ಥ. ಆದ್ದರಿಂದ ನಮ್ಮ ಆಸೆಯನ್ನು ನಾವು ಪಡೆಯಬಹುದಾದ ಭವಿಷ್ಯದ ಮೇಲೆ ಹಾಕುತ್ತೇವೆ. ಆನಂತರ ಅಂತಿಮವಾಗಿ ಆನಂದ ಮತ್ತು ಸಂತೋಷ ಪಡೆಯುತ್ತೇವೆ. ಆದರೆ ನಾವು ಯಾರೆಂಬ ಸತ್ಯ ಅನುಭವದ ಮೂಲಕ ತಿಳಿದಾಗ ಮತ್ತು ಎಲ್ಲ ಪದಾರ್ಥಗಳಲ್ಲಿ ಅಡಗಿರುವ ಅಪರಿಪೂರ್ಣತೆ ಅರಿತು ನಿಜವಾದ ಸಂತೋಷ ನಮ್ಮ ಹೃದಯದಲ್ಲಿದೆ ಎಂದು ತಿಳಿಯುವುದರಲ್ಲಿದೆ. ಆದರೆ ನಮ್ಮಲ್ಲಿ ಎಷ್ಟು ಜನರಿಗೆ ಒಳಗಿನ ಈ ಆತ್ಮದ ವಿಷಯಗೊತ್ತಿದೆ? ನಮ್ಮ ದೈಹಿಕ ಆಯಾಮ ಒಂದೇ ಗೊತ್ತಿದೆ. ಅಂದರೆ ನಮ್ಮ ಜಾಗೃತಿ ಹೆಚ್ಚಾಗಿ ಭೌತಿಕ ಜಗತ್ತಿಗೆ ಸೀಮಿತವಾಗಿದೆ. ಅತಿಯಾದ ಕೊಳಕುತನದಲ್ಲಿ ಮುಳುಗಿ ಹೊರಗಿನ ಬೆರಗಿನಲ್ಲಿ ಒಳಗಿನದನ್ನು ಮರೆಯುತ್ತೇವೆ. ಕಲ್ಪನೆ ಮತ್ತು ದೊಡ್ಡಸ್ಥಿಕೆ ನೈಜಯೋಗ್ಯತೆ ಮತ್ತು ಅಂತರಿಕ ಸ್ವಭಾವಗಳನ್ನು ಹಿಮ್ಮೆಟ್ಟಿಸುತ್ತದೆ. ಪರಿಣಾಮ? ನಾವು ತೃಪ್ತಿಪಡಿಸಲಾಗದ ಆಶೆಯ ಗುಲಾಮರಾಗುತ್ತೇವೆ. ಬ್ರಾಂಡ್, ಲೇಬಲ್ ಮತ್ತು ಘೋಷಣೆಗಳ ಯುಗದಲ್ಲಿ ತೋರಿಕೆಯೆಂಬುದೇ ಪ್ರಧಾನವಾಗುತ್ತದೆ. ಬೇರೆಯವರ ತೀರ್ಮಾನ ಹಾಗೂ ನಮ್ಮೊಳಗಿನ ಸಂಬಂಧವನ್ನು ನಿರ್ಧರಿಸುತ್ತದೆ. ಇಲ್ಲಿನಮ್ಮ ಸ್ವ ಪ್ರತಿಷ್ಠೆ ಬಲವಾಗಿ ಕೆಲಸ ಮಾಡುತ್ತದೆ ಅದು ಜೀವಂತವಾಗಿರಲು ಮತ್ತು ಚಟುವಟಿಕೆಯಿಂದ

ಇರುವುದಕ್ಕಾಗಿ ಸ್ವಪ್ರತಿಷ್ಠೆ ಎಲ್ಲವನ್ನೂ ಹೆಚ್ಚು ಹೆಚ್ಚಾಗಿ ಬಯಸುತ್ತದೆ. ನಾವು ಜೀವನವಿಡೀ ಆ ಸ್ವ ಪ್ರತಿಷ್ಠೆಯ ಸೇವೆಯಲ್ಲಿ ಸದಾಸಿದ್ಧರಾಗಿರುತ್ತೇವೆ. ಏಕೆಂದರ ನಮ್ಮ ಆತ್ಮೀಯತೆಯೇ ಅದರೊಂದಿಗೆ ಬಂಧಿತವಾಗಿದೆ.

ನಮ್ಮಲ್ಲಿಯ ಅನೇಕರಿಗೆ ತಮ್ಮ ತನ ಇಲ್ಲದಿರುವುದು ಮರಣಕ್ಕೆ ಸಮಾನವಾಗಿರುತ್ತದೆ. ನಿಜವಾದ ಆತ್ಮವನ್ನು ಅರಿಯಲು ಈ ಕೃತಕ ಆತ್ಮೀಯತೆ ಕಾರಣವಾಗಬಹುದೆಂದು ಅರಿಯುವುಕ್ಕೆ ಸುಳ್ಳು ಪ್ರತಿಷ್ಠೆಯನ್ನು ನಾವು ಒಂದೆಡೆಯಲ್ಲೆ ಒಯ್ಯುತ್ತೇವೆ. "ಸ್ಟುವರ್ಟ್‌ವೈಲ್ಡ್" ಎಂಬ ಬ್ರಿಟೀಷ್ ಲೇಖಕ ಮತ್ತು ಭೌತಿಕವಾದದ ಮೇಲೆ ಅನೇಕ ಗ್ರಂಥಗಳ ರಚನಾಕಾರ ಈ ರೀತಿ ಹೇಳುತ್ತಾನೆ, "ನಿಮಗೆ ಅಗತ್ಯವೆಂದು ತಿಳಿದಿರುವ ಬಹಳಷ್ಟು ಪದಾರ್ಥಗಳು ಸ್ವ ಪ್ರತಿಷ್ಠೆಯ ನೃತ್ಯವಾಗಿವೆ", ಅವು ನಿಮ್ಮ ವ್ಯಕ್ತಿತ್ವವನ್ನು ಹೆಚ್ಚಿಸುವ ಮತ್ತು ಭದ್ರತೆಯ ನಿಮ್ಮ ಕಲ್ಪನೆಯನ್ನು ಹೆಚ್ಚಿಸುವುದಕ್ಕೆ ಕುಣಿಯುತ್ತವೆ. ಸ್ವಪ್ರತಿಷ್ಠೆಯ ತೃಪ್ತಿಗಾಗಿ ನೀವು ಬಹಳಷ್ಟು ಶಕ್ತಿಯನ್ನು ವ್ಯಯಮಾಡುತ್ತೀರಿ ಈ ಇಚ್ಛೆ ನೆರವೇರುತ್ತಲೆ ಅದು ನಿಮ್ಮೆಲ್ಲ ಹೋರಾಟವನ್ನು ಮರೆಯುವಂತೆ ಮಾಡುತ್ತದೆ. ತಕ್ಷಣ ಬೇಡಿಕೆಯ ಇನ್ನೊಂದು ಪಟ್ಟಿಯನ್ನು ಹಣೆಗೆ ಅಂಟಿಸುತ್ತದೆ. ಸ್ವಪ್ರತಿಷ್ಠೆ ನಿರಂತರವಾಗಿ ತನ್ನದೇ ಆದ ಮುನ್ನೋಟಕ್ಕಾಗಿ ನಿಮ್ಮನ್ನು ದಾಸನಂತೆ ದುಡಿಯುವಂತೆ ಮಾಡುತ್ತದೆ!

ಆದರೆ ಪ್ರತಿಲಿಪಿಗಾರರಿಗೆ ಮಾನವ ದೌರ್ಬಲ್ಯಗಳು ಚೆನ್ನಾಗಿ ಗೊತ್ತಿವೆ. ಅದನ್ನು ಗರಿಷ್ಠತಮವಾಗಿ ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅದರಿಂದಾಗಿ ಜಾಹಿರಾತುದಾರ ಮನುಷ್ಯ ನಗುನಗುತ್ತಾ ಹಣದ ಚೇಲದೊಂದಿಗೆ ಬ್ಯಾಂಕಿನತ್ತ ಮುಖ ಮಾಡುತ್ತಾನೆ. ಅವನನ್ನು ಪದಾರ್ಥಗಳ ಉತ್ಪಾದಕರು ಮತ್ತು ಮಾರಾಟಾನಂತರ ಸೇವೆಸಲ್ಲಿಸುವವರು ಅನುಸರಿಸುತ್ತಾರೆ. ಅವರ ಮುನ್ನಡೆಗೆ ನಾವು ಸಂತೋಷಪಡುತ್ತೇವೆ. ಏಕೆಂದರೆ ನಾವು ಈಗಾಗಲೇ ಒಂದು ವಿಶಿಷ್ಟ ಶೈಲಿಯಲ್ಲಿ ಜೀವನದೊಂದಿಗೆ ವ್ಯವಹರಿಸುವುಕ್ಕಾಗಿ ಮನಸ್ಸನ್ನು ತಯಾರು ಗೊಳಿಸಿದ್ದೇವೆ. "ಒಳಗಿರುವ ಬುದ್ಧಿಮತ್ತೆಯಿಂದಲ್ಲ. ನಮ್ಮ ಜೀವನದಲ್ಲಿ ಉನ್ನತ ಮಟ್ಟದ ಜಾಗೃತಿ ಉಂಟಾಗುವವರೆಗೆ ಮನಸ್ಸು ಜಾಹಿರಾತಿನ ಪ್ರಪಂಚವನ್ನು ಅರ್ಥ ಮಾಡಿಕೊಳಳಲಾರದು. ಎಲ್ಲಿಯವರೆಗೆ ನಮ್ಮ ಆತ್ಮ ಸಂತೋಷಕ್ಕಾಗಿ ಬಾಹ್ಯ ಜಗತ್ತಿನತ್ತ ವಾಲುತ್ತೇವೆಯೊ ನಮ್ಮ ಒಳಗಿನ ಅಂತಃಸಾಕ್ಷಿಗೆ ಎಚ್ಚೆತ್ತು ಕೊಳ್ಳುವುದಿಲ್ಲವೊ ಅಲ್ಲಿಯವರೆಗೆ ಜಾಹಿರಾತು ಪ್ರಪಂಚ ನಮ್ಮ ಮನೋಭೂಮಿಕೆಯನ್ನು ಪ್ರಭಾವಿತಗೊಳಿಸುತ್ತ ಹೋಗಬಹುದು. ಆದರೆ ಅದರಲ್ಲಿ ನಮ್ಮ ವಿನಾಶವಿದೆ".

(ಸಾಭಾರ: ಡೆಕ್ಕನ್ ಹೆರಾಲ್ಡ್ ಪತ್ರಿಕೆ)

* * *

ವೇದ ಬಿಂದು

– *ವಿನೋಬಾ*

(ಕಳೆದ ಸಂಚಿಕೆಯಿಂದ ಮುಂದುವರೆದದ್ದು...)

೪೧

ಶುಕ್ರಗ್ರಹವನ್ನು ವೇದದಲ್ಲಿ ವೈನ್ ಎಂದು ಹೇಳುತ್ತಾರೆ. ಇಂಗ್ಲೀಷ್‌ನಲ್ಲಿ ವೀನಸ್ ಎಂದು ಹೇಳುತ್ತಾರೆ. ಎರಡೂ ಶಬ್ದ ಪ್ರೇಮದ ದರ್ಶಕವಾಗಿವೆ. ಗುರು ಸದಗುರು ಇದೆ. ಶುಕ್ರ ಆದರ ಶಿಷ್ಯ. ಗುರು ಜ್ಞಾನದ ಮೂರ್ತಿಯಾದರೆ ಶುಕ್ರ ಪ್ರೇಮದ ಮೂರ್ತಿ.

೪೨

ವೇದದಲ್ಲಿ ಋಷಿಗಳು ಪ್ರಾರ್ಥಿಸುವುದೇನೆಂದರೆ "ಯಾರು ಜಿಪುಣರೋ ಅವನ ಮನಸ್ಸನ್ನು ನೀನು ಸಮೃದ್ಧಗೊಳಿಸು, ಅವನ ಮನಸ್ಸಿಗೆ ದಾನದ ಪ್ರೇರಣೆ ಕೊಡು. ಋಷಿಯ ಈ ಪ್ರಾರ್ಥನೆ ಬಹಳ ಕೆಲಸಕ್ಕೆ ಬರುವಂಥದ್ದಾಗಿದೆ.

೪೩

ವೇದವೆಂದರೆ ಗ್ರಂಥವಲ್ಲ. ಎಲ್ಲಿಯದರೂ ಯಾವುದೇ ಶಾಶ್ವತ ಎಂಬ ಶಬ್ದ ಪ್ರಕಟವಾಗಿದ್ದಲ್ಲಿ, ಅದು ವೇದವೇ. ಆದ್ದರಿಂದ ಅನುಭವಿ ಪುರುಷರಿಂದ ಅನುಭವದಿಂದ ಏನಾದರೂ ವೇದ (ಜ್ಞಾನ) ಸಿಕ್ಕೇಸಿಗುತ್ತದೆ.

೪೪

ವೇದಾನ್ ಉದ್ಧರತೆ ಬೇರೆಲ್ಲವನ್ನು ಮುಳುಗುವುದಕ್ಕೆ ಕೊಡು ವೇದವನ್ನು ಉಳಿಸು. ಒಂದು ಕಥೆಯಿದೆ ಪ್ರಳಯದ ಸಮಯ ಮತ್ಸ್ಯಾವತಾರವಾಯಿತು. ಅದರ ಮೂಲಕ ವೇದಗಳನ್ನು ಉಳಿಸಲಾಯಿತು. ವೇದಗಳನ್ನು ಉಳಿಸುವುದರ ಅರ್ಥ ಅಂತರ್ಜ್ಞಾನವನ್ನು ಉಳಿಸುವುದು. ಮತ್ತು ಹಳೆಯ ಎಲ್ಲ ವಿಷಯಗಳನ್ನು ಮುಳುಗಿಸುವದು.

೪೫

ವೇದಾಂತವೆಂದರೆ, (೧) ವೇದ, ಕುರಾನ್, ಬೈಬಲ್ ಇತ್ಯಾದಿ ಎಲ್ಲ ಗ್ರಂಥಗಳ ಅಂತ (೨) ಮತ್ತು ಕೇವಲ ಆಧ್ಯಾತ್ಮದ ಚಿಂತನ–ಮನನ (೩) ಮತ್ತು ಜೊತೆ ಜೊತೆಯಲ್ಲಿ ನಾಮ ಸ್ಮರಣೆ.

೪೬

ಋಗ್ವೇದದಲ್ಲಿ ಗುಣ ಶಬ್ದವಿಲ್ಲ. ಆದರೂ ಕೂಡ ಸೃಷ್ಟಿ ತ್ರಿ ಗುಣಾತ್ಮಕವಾಗಿದೆ. ಇದನ್ನು ಗಮನದಲ್ಲಿ ಇರಿಸಿಕೊಂಡು ಎಲ್ಲರಿಗೆ ಉಪದೇಶ ಕೊಡುತ್ತದೆ. ಅದರಿಂದ ಸಾರವನ್ನು ಗ್ರಹಿಸುವುದು ನಮ್ಮ ಕೆಲಸ.

೪೭

ವೇದ ಉಪಾಸನೆ ಕಲಿಸುತ್ತದೆ, ವೇದಾಂತ ಜ್ಞಾನ.

೪೮

ಋಷಿ ಮತ್ತು ವೃಷಭ ಎರಡೂ ಒಂದೇ ಧಾತುವಿನಿಂದ ರಚಿತವಾದ ಶಬ್ದಗಳು. ಹಿಂದಿನ ಕಾಲದಲ್ಲಿ ಋಷಿ ಉತ್ಪಾದನೆಯ ಕೆಲಸ ಮಾಡುತ್ತಿದ್ದರು. ವೃಷಭ ಮುಂದೆ ಮುಂದಕ್ಕೆ ಹೋಗುತ್ತಿದ್ದವು ಮತ್ತು ಋಷಿಗಳು ಹಿಂದಿನಿಂದ.

೪೯

ವೇದ ಸಮಗ್ರ ಜೀವನವನ್ನು ನೋಡಿ ನಡೆಯುತ್ತದೆ. ಗೀತಾ ಉಪನಿಷತ್ ಮುಖ್ಯವಾಗಿ ಮುಮುಕ್ಷುವನ್ನು ನೋಡಿ ನಡೆಯುತ್ತವೆ. ಅದಲ್ಲದೆ ಹೇಳುವುದೆಲ್ಲವೂ ಗೌಣ.

೫೦

ಶಂಕರ ವಿಚಾರ ಮತ್ತು ವೇದ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಶಂಕರಾಚಾರ್ಯರು ಸ್ವತಃ ಕರ್ಮರಥರಾಗಿದ್ದರು. ಶಂಕರ ವಿಚಾರದಷ್ಟು ವೇದ ನಿವೃತ್ತಿ ಪರಾಯಣವಿಲ್ಲ.

೫೧

ಅದ್ವೇಷೋ ಅಸ್ತೆಯೊದರ್ಶೆ (ಋಗ್ವೇದ.೧.೨೪.೪) ಮನುಷ್ಯನ ಬಹಳಷ್ಟು ಕೃತಿಗಳು ಅವನ ಕೈಯಿಂದಲೇ ಆಗುತ್ತವೆ. ಮನುಷ್ಯ ಯಾರ ದ್ವೇಷ ಮಾಡುತ್ತಾನೊ ಅವನ ಕಡೆಗೆ ಕೈ ಚಾಚುತ್ತದೆ. ಆದ್ದರಿಂದ ಹೇಳಲಾಗಿದೆ, ನನ್ನ ಕೈಯಿಂದ ಎಂದೂ ದ್ವೇಷವಾಗದಿರಲಿ. ದ್ವೇಷರಹಿತ ಮನುಷ್ಯ ಪ್ರೇಮವನ್ನು ಹರಡುತ್ತಾನೆ.

೫೨

ಅಹಿಂಸೆ ತುಂಡುಗಳಲ್ಲಿ ಕೆಲಸ ಮಾಡುವುದಿಲ್ಲ. ಅದು ಅಖಂಡವಾದ ಏಕರಸ. ವೇದಗಳು ಅದಕ್ಕೇ 'ಅದಿತಿ' ಎಂಬ ಹೆಸರು ಕೊಟ್ಟಿವೆ.

೫೩

ಚತ್ವಾರಿ-ಶೃಂಗಾ.. ದ ಅರ್ಥವನ್ನು ಬರೆದಂಥ ಋಷಿಗೆ ಗೊತ್ತು ಆದರೆ ವ್ಯಾಕರಣದ ಮಹಾಭಾಷ್ಯಕರಾದ ಪತಂಜಲಿಯು ನಾಮ, ಕ್ರಿಯಾಪದ, ಅವಯವ, ನಿಘಾತವನ್ನು ನಾಲ್ಕು ಕೊಂಬು, ಏಳು ವಿಭಕ್ತಿಗಳನ್ನು ಏಳು ಕೈಗಳು ಎಂಬಿತ್ಯಾದಿ ಕಲ್ಪನೆ ಮಾಡಿದ್ದಾನೆ.

೫೪

ಚಿಕ್ಕಂದಿನಲ್ಲಿ ಅನೇಕರು ಜ್ಞಾನಿಗಳಾದರು. ಇದನ್ನು ಜಗತ್ತು ನೋಡಿದೆ. ಮಹಾರಾಷ್ಟ್ರದಲ್ಲಿ ಜ್ಞಾನದೇವ ಮಹಾರಾಜರ ಉದಾಹರಣೆ ಎಲ್ಲ ಜನರಿಗೂ ಗೊತ್ತಿದೆ. ಮುಂದೆ ಕಪಿಲಾ, ಶುಕದೇವ ಮುಂತಾದವರು ಜನ್ಮದಿಂದಲೇ ಜ್ಞಾನಪ್ರಾಪ್ತ ಮಾಡಿದ್ದರು. ಅಂದರೆ ಅವರು ಜನ್ಮ ಸಿದ್ಧರು. ಮತ್ತು ಇದಕ್ಕೂ ಮುಂದಿನ ಉದಾಹರಣೆ ನಾಮದೇವರದಿದೆ. ಅವರು ಸ್ವತಃ ಹೇಳಿದ್ದಾರೆ-*ಗರ್ಭೆ ನು ಸನ್ ಅನು ಏಷಾಂ ಅವೇದಂ ಅಹಂ ದೇವಾನಾಮ್ ಜನಿಮಾನಿ ವಿಶ್ವಾ* (೧೪.೨.೧೪) ನನಗೆ ಗರ್ಭದಲ್ಲಿ ಇದ್ದಾಗಲೇ ದೇವತಾದಿಗಳ ಜನ್ಮಗಳರಹಸ್ಯ ಜ್ಞಾನವಾಯಿತು.

ವಾಮದೇವನಿಗೆ ಗರ್ಭದಲ್ಲಿ ಜ್ಞಾನ ಹೇಗೆ ಉಂಟಾಯಿತು? ವಿಜ್ಞಾನದ ಬಹಳಷ್ಟು ವಿಕಾಸವಾಗಿರುವುದರಿಂದ ಈ ಪ್ರಕಾರದ ಸಂಶಯ ಅವಶ್ಯ ಬರುತ್ತದೆ.

ಆದರೆ ವಿಜ್ಞಾನಕ್ಕೆ ಇನ್ನು ಪೂರ್ಣತೆಯು ಪ್ರಾಪ್ತವಾಗಿಲ್ಲ. ಅದರ ಶೋಧನೆ ನಡೆಯುತ್ತಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ನನಗೆ ಇದರಲ್ಲಿ ಅಶ್ರದ್ಧೆ ಆಗಲಿಲ್ಲ. ಕಳೆದ ಜನ್ಮದ ಯೋಗಿಗಳು ಯಾರು ಸರಿಸುಮಾರು ಪೂರ್ಣತೆಯನ್ನು ಮುಟ್ಟಿದ್ದರೂ ಯಾರ ಪೂರ್ಣತೆಯ ಪ್ರಾಪ್ತಿಯಲ್ಲಿ ಅಥವಾ ಅವಷ್ಟಿ ಪಾಪದ ಕ್ಷಯದಲ್ಲಿ ಕೇವಲ ಅಲ್ಪವೇ ಭಾವನಾನುಭಾವದ ಅಗತ್ಯವಿತ್ತೊ ಅವರು ಆ ಅಗತ್ಯಕ್ಕೆ ಅನುಗುಣವಾಗಿ ಅಂತಿಮವಾದ ದೇಹಾನುಭವದಲ್ಲಿ ಅತಿಶೀಘ್ರ ಜ್ಞಾನಿ ಆಗಿದ್ದಿರಬಹುದು ಎಂದು ಒಪ್ಪಬಹುದು. ಅತಿಶೀಘ್ರದಲ್ಲಿ ಗರ್ಭವಾಸ ಕೂಡ ಸೇರಿಕೊಳ್ಳಬಹುದು. ಆದರೆ ಕಠಿಣವಾದ ಪ್ರಶ್ನೆ ಇದಲ್ಲ. ವಾಸ್ತವಿಕ ಕಠಿಣ ಪ್ರಶ್ನೆ ಜ್ಞಾನಾವಸ್ಥೆ ಒಂದು ವೇಳೆ ಇಷ್ಟೊಂದು ತೀವ್ರವಾಗಿದ್ದರೆ ಅಥವಾ ಪಾಪಕ್ಷಯಕ್ಕಾಗಿ ಗರ್ಭಾನುಭವವೇ ಸಾಕಾಗಿತ್ತಾದರೆ "ಒಳ್ಳೆಯ ಮನುಷ್ಯ ಗರ್ಭಾವಸ್ಥಾನದಿಂದ ಹೊರಗೆ ಬಂದು ಹಾಗೂ ದೇಹಧಾರಿಯಾಗಿ ಅನುಭವವನ್ನು ಅನಾವಶ್ಯಕವಾಗಿ ಬೆಳೆಸಿರಬಹುದು?" ಇದರ ಉತ್ತರ ಸಿಗುವುದಿಲ್ಲ. ನಾವು ತಿಳಿಯಬೇಕಾದುದೇನೆಂದರೆ ವಿಶ್ವ ಕಾರುಣ್ಯಕ್ಕಾಗಿ ಅಂದರೆ ವಿಶ್ವೋಪಕಾರಕ್ಕಾಗಿ ಭಗವಂತ ಇಂಥ ಯೋಜನೆ ಮಾಡಿದ ಅಂತೂ ಚಿಂತನೆಗೆ ಕೊನೆಯಿದೆ. ಅದರ ಮುಂದೆ ಚಿಂತನೆ ನಡೆಯುವುದಿಲ್ಲ. ನಮ್ಮ ಅನುಭವ ಸೀಮಿತ. ಆದ್ದರಿಂದ ಒಂದಿಲ್ಲ ಒಂದು ಕಡೆ. ಚಿಂತನೆಯಲ್ಲಿ ಭಗವಂತ ಉಪಸ್ಥಿತನಾಗುತ್ತಾನೆ. ಎಲ್ಲಿ ಅವು ಬರುತ್ತಾನೋ ಅಲ್ಲಿ ನಮ್ಮ ಚಿಂತನೆಯ ಸಮಾಪ್ತಿಯಾಗುತ್ತದೆ.

* * *

ವೇದಗಳ ಅಕ್ಷರ ಗ್ರಂಥಗಳಲ್ಲಿ ಸಿಗುತ್ತದೆ, ಅರ್ಥವನ್ನು ಜೀವನದಲ್ಲಿ ಹುಡುಕಬೇಕಾಗುತ್ತದೆ.

(ಈ ಸರಣಿ ಮುಗಿಯಿತು)

* * *

ಫಿಜಿಕ್ಸ್ ಮತ್ತು ವೇದಾಂತ

– ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು

ವೇದಾಂತ ಎಂಬುದು ಜಗತ್ತಿನೊಳಗೆಲ್ಲ ಅತಿ ಪುರಾತನವಾದ ಧರ್ಮ ಗ್ರಂಥಗಳೆನಿಸಿಕೊಂಡಿರುವ ವೇದಗಳಲ್ಲಿ ಉಪನಿಷತ್ತುಗಳೆಂಬ ಹೆಸರಿನಿಂದ ಪ್ರಖ್ಯಾತವಾಗಿರುವ ತತ್ತ್ವ ಸಾಕ್ಷಾತ್ಕಾರ ಕ್ರಮಕ್ಕೂ ಹೆಸರು. ಉಪನಿಷತ್ತುಗಳೆಂಬ ಅರ್ಥದಲ್ಲಿ ಭಾಷ್ಯಕಾರರು ಇದನ್ನು ಬಹುವಚನದಲ್ಲಿಯೇ ಉಪಯೋಗಿಸುವರು. ಆಧುನಿಕ ಮಾನವನಿಗೆ ಈ ವೇದಾಂತದ ಅವಶ್ಯಕತೆಯಿದೆಯೆ? ವರ್ತಮಾನಕಾಲದ ಮಾನವನು ಎಲ್ಲಾ ಬಗೆಯಿಂದಲೂ ತನ್ನ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು ಭೌತಿಕವಿಜ್ಞಾನ ಶಾಸ್ತ್ರದ ಬಲದಿಂದ ತನ್ನ ಜೀವನಕ್ರಮವನ್ನು ಮಾರ್ಪಡಿಸಿಕೊಂಡು ಸೌರವ್ಯೂಹದ ಎಲ್ಲಾ ಗ್ರಹೋಪಗ್ರಹಗಳನ್ನು ಕೂಡ ನೇರವಾಗಿ ಶೋಧಿಸಬಲ್ಲ ಪ್ರಜ್ಞಾಕೌಶಲ್ಯವನ್ನು ಯಂತ್ರೋಪಕರಣಗಳಿಂದ ಸಾಧಿಸಿಕೊಂಡಿರುತ್ತಾನೆ. ಹೀಗಿರುವಲ್ಲಿ ಅವನಿಗೆ ವೇದಾಂತದಿಂದ ಆಗುವದೇನು ಉಳಿದಿದೆ? ಅತಿ ಪ್ರಾಚೀನಕಾಲದಲ್ಲಿ ಕೆಲವು ಋಷಿಗಳು ಒಂದು ಕಡೆ ಕುಳಿತು ಮಾಡಿದ ಊಹಾಪೋಹಗಳ ರಾಶಿಯು, ಶಾಸ್ತ್ರೀಯವಾಗಿ ವಿಷಯಗಳನ್ನು ಪರೀಕ್ಷಿಸಿ ನಿಶ್ಚಯಿಸಿಕೊಳ್ಳುವ ಹಂತಕ್ಕೆ ಏರಿರುವ ಬುದ್ಧಿವಂತನಾದ ಈಗಿನಕಾಲದ ಮಾನವನಿಗೆಯಾವ ಉಪಕಾರವನ್ನು ಮಾಡೀತು?

ಈ ಪ್ರಶ್ನೆಯು ಅಥವಾ ಆಕ್ಷೇಪವು, ಭೌತಿಕವಿಜ್ಞಾನದಿಂದ ಜೀವನಕ್ಕೆವಿವಿಧ ಸೌಕರ್ಯಗಳನ್ನು ಕಲ್ಪಿಸಿಕೊಂಡು ನಾಗರಿಕತೆಯಲ್ಲಿ ಮುಂದುವರಿದಿರುವವರೆಂದು ಎಲ್ಲರೂ ಭಾವಿಸಿತ್ತಿರುವ ಪಾಶ್ಚಿಮಾತ್ಯರಲ್ಲಿ ಹಲವರ ಮತ್ತು, ಆ ಪಾಶ್ಚಿತ್ಯರ ಅನುಕರಣೆಯೇ ತಮಗೆ ಶ್ರೇಯಸ್ಕರವೆಂದು ದೃಢವಾಗಿ ನಂಬಿರುವ ಪೂರ್ವದೇಶಗಳ ಅನೇಕರ ಪರವಾಗಿ ನಾವು ಬರೆದಿರುವದು. ಪೂರ್ವದೇಶಗಳಲ್ಲಿರುವ ಹಲವು ಜನಾಂಗಗಳು ಪಾಶ್ಚಿಮಾತ್ಯರ ನಾಗರಿತೆಯನ್ನು ಹೊಸದಾಗಿ ಬಳಸಿಕೊಂಡಿರುವ ವೇಗದ ಭರದಲ್ಲಿ ತಮ್ಮ ಪ್ರಾಚೀನವಾದ ಆಚಾರ ವಿಚಾರಗಳನ್ನು ಪೂರ ಕಿತ್ತೊಗೆದಿರುತ್ತವೆ. ಅಥವಾ ವಿದ್ಯುದ್ವೇಗದಿಂದ ಕಿತ್ತೊಗೆಯುತ್ತಿವೆ. ಅದರಲ್ಲಿಯೂ ತೃಪ್ತಿ, ಸಹನೆ, ಪರೋಪಕಾರ, ಲೋಕಸೇವೆ, ಪರಲೋಕಪರ ಜನ್ಮಗಳಲ್ಲಿ ವಿಶ್ವಾಸ ಮುಂತಾದ ಧ್ಯೇಯಗಳನ್ನು ಅನೇಕ ಶತಮಾನಗಳಿಂದ ಕಾಯ್ದುಕೊಂಡು ಬಂದಿದ್ದ ಭಾರತದೇಶದವರು ಈಗ ತಾನೆ ತಮಗೆ ದೊರೆತಿರುವ ಸ್ವಾತಂತ್ರ್ಯದ ಫಲವಾಗಿ ಹಳೆಯ ಆಚಾರ ವಿಚಾರಗಳು ತಮ್ಮ ಮುನ್ನಡೆಗೆ ಅಡ್ಡಿಯಾಗಿರುವವೆಂದೇ ಬಗೆಯುತ್ತಾ ಬಂದಿರುತ್ತಾರೆ. ಪಾಶ್ಚಿಮಾತ್ಯ ವಿಶ್ವಕರ್ಮ ವಿಶ್ವಾಮಿತ್ರ ಪರುಶುರಾಮರೆನಿಸಿರುವ ಘಟಕರ ಸಂಗದಿಂದ ನಮ್ಮ ದೇಶದವರಿಗೆ ಐಹಿಕ ಸುಖದ ಆಶಾ ಪ್ರತೀಕ್ಷೆಗಳು ಬಲವಾಗಿದೆ, ಸ್ವಾತಂತ್ರ್ಯ ಪ್ರಿಯತೆಯು ಹೆಚ್ಚುತ್ತಿದೆ, ದೇಶಾಭಿಮಾನವು ಉಕ್ಕುತ್ತಿದೆ. ಇಲ್ಲಿ ರಾಜರ ಆಳ್ವಿಕೆಯನ್ನು ಕೊನೆಗಾಣಿಸಲಾಗಿದೆ. ಪ್ರಜಾಸತ್ತೆ ಅಥವಾ ಕಷ್ಟಪಟ್ಟು ಕೆಲಸಮಾಡುವ ಜನರ ಉದ್ಧಾರ-ಇವುಗಳೇ ನಮ್ಮವರ ಗುರಿಯಾಗಿವೆ.

ಪಾರ್ಲಿಮೆಂಟು, ಹೊಸಹೊಸ ಕಾನೂನುಗಳು, ಚುನಾವಣೆ, ರಾಷ್ಟ್ರಘಟನಾ ಸೂತ್ರಗಳು, ಅಧ್ಯಕ್ಷರು, ಸೈನ್ಯಬಲ, ಈ ಭಾವನೆಗಳು ನಮ್ಮ ದೇಶದೊಳಕ್ಕೆ ನುಗ್ಗಿ ಬಿಟ್ಟಿವೆ. ಉದ್ಯೋಗದ ಚಟುವಟಿಕೆಗಳು, ಸಂಪದಭಿವೃದ್ಧಿಯ ಯೋಜನೆಗಳು, ಯಂತ್ರಗಳು, ಗಿರಣಿಗಳು, ರೈಲುಗಳು, ಆಣೆಕಟ್ಟುಗಳು, ವಿದ್ಯುಚ್ಛಕ್ತಿ ಕೇಂದ್ರಗಳು ಇಂಥ ನೂತನ ಮಯಾಸುರನ ಶಿಲ್ಪಚಾತುರ್ಯಗಳು ಅತಿವೇಗದಿಂದ ಸಾಗಿವೆ. ವಿದ್ಯಾಶಾಲೆಗಳಲ್ಲಿ ಧರ್ಮನೀತಿಗಳ ಬೋಧನೆಯು ಕೂಡದೆಂಬ ರಾಷ್ಟ್ರಶಾಸನವಾಗಿದೆ. ಹಳೆಯ ನಂಬಿಕೆಗಳು ಮಾಯವಾಗಿವೆ. ನಮ್ಮದು ಜಾತ್ಯತೀತರಾಷ್ಟ್ರಶಾಸನವಾಗಿದೆ. ಇಲ್ಲಿ ಸಮಾಜದ ವೇಷಭೂಷಣಗಳ ರೂಪವು ವೇಗದಿಂದ ಮಾರ್ಪಡುತ್ತಿದೆ. ವಿವಾಹದ ಮತ್ತು ಭೋಜನದ ನಿಯಮಗಳ ಕಟ್ಟು ಸಡಿಲವಾಗಿದೆ; ಜನರ ಸಂಚಾರವೂ ದೇಶವಿದೇಶಗಳಿಗೆ ಪ್ರಯಾಣಗಳೂ ಹೊಸ ವಿಚಾರಗಳ ಅವಲಂಬನೆಯೂ ವೃತ್ತಾಂತಪತ್ರಿಕೆಗಳ ಪಾರಾಯಣವೂ ಜನರ ವಿಚಾರಗಳನ್ನು ಕಲಕುವ ಭಾಷಣಗಳ ಸುರಿಮಳೆಗಳೂ ಹೆಚ್ಚುತ್ತಿವೆ. ಅಂತೂ ಕೂಡಿದ ಮಟ್ಟಿಗೂ ನಮ್ಮ ದೇಶಕ್ಕೆಲ್ಲ ಪಾಶ್ಚಿಮಾತ್ಯ ದೇಶಗಳ ಬಣ್ಣವನ್ನು ಬಳಿದದ್ದಾಗಿದೆ.

ಇದು ನಿರೀಕ್ಷಕರ ಕಣ್ಮನಗಳಿಗೆ ಗೋಚರವಾಗುತ್ತಿರುವ ದೃಶ್ಯಗಳ ಒಂದು ಪಕ್ಕ. ಈಗ ಇನ್ನೊಂದು ಪಕ್ಕದ ಕಡೆಗೆ ದೃಷ್ಟಿಯನ್ನು ಹೊರಳಿಸೋಣ. ದೇಶದಲ್ಲಿ ಜನಸಂಖ್ಯೆ ಬೆಳೆಯುತ್ತಿದೆ. ಜನಕ್ಕೆ ಉದ್ಯೋಗಗಳೇನೂ ಅಷ್ಟು ಮಟ್ಟಿಗೆ ಸಿಕ್ಕುತ್ತಿಲ್ಲ. ವಿನೋದ ಸಾಮಗ್ರಿಗಳು ಹೆಚ್ಚಾಗುತ್ತಿವೆ. ಆಹಾರವು ತಕ್ಕಷ್ಟು ಸಿಕ್ಕುತ್ತಲಿಲ್ಲ. ಜೀವನದ ಮಟ್ಟವು ರೂಪಾಯಿಗಳ ಆದಾಯದ ದೃಷ್ಟಿಯಿಂದ ಹೆಚ್ಚುತ್ತಿದೆ. ಆದರೆ ಸರಕಾರದ ತೆರಿಗೆಗಳ ಸಂಖ್ಯೆಗಳೂ ಹೆಚ್ಚುತ್ತಿವೆ, ರೂಪಾಯಿಗೆ ಕೊಳ್ಳುವ ಯೋಗ್ಯತೆಯೂ ಕಡಮೆಯಾಗುತ್ತಲೇ ಇದೆ. ರಾಜಕೀಯ ವಿಚಾರಗಳು ಹೆಚ್ಚುತ್ತಿವೆ. ಪ್ರಜೆಗಳಿಗೆ ನೆಮ್ಮದಿಯೇನೂ ಹೆಚ್ಚುತ್ತಿಲ್ಲ. ಜಾತಿಕುಲಗಳ ಕಟ್ಟುಗಳೇನೋ ಹೋಗಿವೆ, ಜನರಲ್ಲಿ ಒಡಕುಗಳೇನೂ ಕಡಿಮೆಯಾಗಿಲ್ಲ. ಸ್ಕೂಲು ಕಾಲೇಜುಗಳೇನೋ ಹೆಚ್ಚುತ್ತಿವೆ, ವಿದ್ಯಾರ್ಥಿಗಳ ತಿಳೀವಳಿಕೆಯ ಮಟ್ಟವು ಕಡಿಮೆಯಾಗುತ್ತಲೇ ಹೋಗುತ್ತಿದೆ. ಜನನಾಯಕರ ನೀತಿಬೋಧನೆಯ ಭಾಷಣಗಳು ಆಗುತ್ತಲೇ ಇವೆ; ಸರಕಾರಿಯ ಹೊಣೆಗಾರನ ನೌಕರರ ನೀತಿಭ್ರಷ್ಟತನದ ಅಂಟುರೋಗವು ಹೆಚ್ಚುತ್ತಲೇ ಇದೆ. ವಿದ್ಯಾರ್ಥಿಗಳ ಮತ್ತು ಜನರ ಅತೃಪ್ತಿ ಪ್ರದರ್ಶಕವಾದ ಮುಷ್ಕರಗಳೂ ಕಾಣಿಸಿಕೊಳ್ಳುತ್ತಲೇ ಇವೆ. ವೈದ್ಯಕೀಯ ಸಹಾಯವು ಹೆಚ್ಚುತ್ತಿದೆ. ರೋಗಗಳೇನೂ ಕಡಮೆಯಾಗಿಲ್ಲ. ಭಾಷಾನುಗುಣವಾಗಿ ದೇಶಗಳನ್ನು ವಿಭಾಗಿಸಿ ಭಾಷಾಭಿವೃದ್ಧಿಗೆ ಅನುಕೂಲವನ್ನು ಕಲ್ಪಿಸಲಾಗಿದೆ; ಆದರೆ ಭಾಷಾಭಕ್ತಿಯ ನೆಪದಲ್ಲಿಯೇ ಹೊಡೆದಾಟಗಳು ಎದ್ದುಕೊಂಡಿವೆ! ಈ ದೃಷ್ಟಿಯಿಂದ ನೋಡುವ ಜನರು ನಮ್ಮ ದೇಶದಲ್ಲಿ ಉಂಟಾಗಿರುವ ನವಜಾಗೃತಿಯ ಭೌತಿಕ ವಿಜ್ಞಾನದಿಂದ ನಮ್ಮ ತಿಳಿವಳಿಕೆಯು ಹೆಚ್ಚುತ್ತಿವೆಯಾದರೂ ನೀತಿಯ ತತ್ತ್ವ, ಗುರುಹಿರಿಯರಲ್ಲಿ ಭಕ್ತಿ, ಶಾಸ್ತ್ರದಲ್ಲಿ ಶ್ರದ್ಧೆ, ಈಶ್ವರಾಸ್ತಿತ್ವದಲ್ಲಿ ನಂಬಿಕೆ, ಇವೇ ಮುಂತಾದ ಬೆಲೆಯುಳ್ಳ ಅಧ್ಯಾತ್ಮಿಕ ವರ್ತನೆಗಳನ್ನು ಬೋಧಿಸುತ್ತಿದ್ದ ಮತಗಳೂ ಇರುವುದು ಒಳ್ಳೆಯದೆಂದು ಭಾವಿಸುತ್ತಿದ್ದಾರೆ. ಯಾವನು ಯಾವ ಮತಕ್ಕೇ ಸೇರಿರಲಿ, ಅವನ ಧರ್ಮವು ಭೌತಿಕ ವಿಜ್ಞಾನಕ್ಕೆ ಹೊಂದಿಕೆಯಾಗಿರಬೇಕಾದದ್ದು

ಮಾತ್ರ ಅವಶ್ಯ ಎಂಬುದು ಅವರ ಅಭಿಪ್ರಾಯ. ಭೌತಿಕ ವಿಜ್ಞಾನವು ಪ್ರತ್ಯಕ್ಷವಾಗಿ ಜನರಿಗೆ ಉಪಕಾರವನ್ನು ಮಾಡುತ್ತಿರುವುದನ್ನು ಅಲ್ಲಗಳೆಯುವದಕ್ಕೆ ಆಗುವದಿಲ್ಲ; ಇದರಂತೆ ಮತಗಳ ಉಪದೇಶವನ್ನು ಕಡೆಗಣಿಸುವದಕ್ಕೂ ಆಗುವದಿಲ್ಲ. ಆದ್ದರಿಂದ ಕಾಲಕ್ಕೆ ತಕ್ಕಂತೆ ಅಂಧಶ್ರದ್ಧೆಯನ್ನೂ ಮೂಢ ವಿಶ್ವಾಸಗಳನ್ನೂ ಕಿತ್ತುಹಾಕಿ, ಪ್ರಾಚೀನ ಮತಬೋಧಗಳಲ್ಲಿರುವುದರಲ್ಲಿ ಯಾವಾವುದು ಭೌತಿಕ ವಿಜ್ಞಾನಕ್ಕೆ ಅವಿರುದ್ಧವಾಗಿರುವದೋ ಅದನ್ನು ಉಳಿಸಿಕೊಳ್ಳುವದು ಯುಕ್ತ ಎನ್ನುತ್ತಿದ್ದಾರೆ ಅವರು.

ವೇದಾಂತಕ್ಕೂ ಅದರ ಅಧಾರಧ ಮೇಲೆ ನಿಂತಿರುವ ಸನಾತನಧರ್ಮಕ್ಕೂ ಈ ಹಿತವಾದವು ಎಷ್ಟರಮಟ್ಟಿಗೆ ಅನ್ವಯಿಸುತ್ತದೆ? ಎಂಬುದನ್ನು ವಿಚಾರಿಸುವದು ಅವಶ್ಯ ಏಕೆಂದರೆ ಮಿಕ್ಕ ಧರ್ಮಗಳಂತೆ ಸನಾತನ ಧರ್ಮದಲ್ಲಿ ಎಂದಿಗೂ ಶಾಸ್ತ್ರೀಯ ವಿಚಾಗಳನ್ನು ಅಲಕ್ಷಿಸಿರಲಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಕ್ರೈಸ್ತ ಮತಕ್ಕೆ ಆಧಾರವಾಗಿರುವ ಬೈಬಲು ಗ್ರಂಥದಲ್ಲಿ ಹೇಳಿರುವ ವಿಷಯಗಳಿಗೆ ವಿರುದ್ಧವಾಗಿವೆಯೆಂದು ಭಾವಿಸಲಾದ ಶೋಧಗಳನ್ನು ಮಾಡಿದ ವಿಜ್ಞಾನಿಗಳಿಗೆ ಚಿತ್ರವಿಚಿತ್ರ ಹಿಂಸೆಗಳನ್ನು ಕಲ್ಪಿಸಲಾಗಿತ್ತು. ಅವರನ್ನು ಸಮಾಜದಿಂದ ಹೊರದೂಡಲಾಗುತ್ತಿತ್ತು. ಇತ್ತೀಚಿಗೆ ಭೌತಿಕ ವಿಜ್ಞಾನವು ಬೆಳೆದಂತೆಲ್ಲ ಧಾರ್ಮಿಕ ವಿಚಾರಗಳಲ್ಲಿಯೂ ಈಶ್ವರ, ಜೀವ, ಲೋಕಾಂತರ-ಮುಂತಾದವುಗಳಲ್ಲಿಯೂ ಜನರಿಗೆ ಅನಾದರವೇ ಹೆಚ್ಚುತ ಬಂದಿತು. ಕ್ರೈಸ್ತ ಧರ್ಮವು ಭೌತಿಕ ವಿಜ್ಞಾನಕ್ಕೆ ವಿರೋಧಿಯೆಂದೇ ಅನೇಕರು ಬಗೆದು ಅದನ್ನು ಕಡೆಗಣಿಸುವದಕ್ಕೆ ಮೊದಲು ಮಾಡಿದರು. ಈ ಕಾರಣಗಳಿಂದ ಆ ದೇಶಗಳಲ್ಲಿ ಮತಧರ್ಮಗಳಿಗೂ ವಿಜ್ಞಾನಕ್ಕೂ ತಿಕ್ಕಾಟವು ಎದ್ದುಕೊಂಡದ್ದು ಸ್ವಾಭಾವಿಕವಾಗಿರುತ್ತದೆ. ನಮ್ಮ ದೇಶದಲ್ಲಿ ಹಾಗಿಲ್ಲ. ಅತ್ಯಂತ ವಿರಕ್ತರಾಗಿ ಕಾಡಿನಲ್ಲಿ ಗೆಡ್ಡೆಗೆಣಸುಗಳನ್ನು ತಿಂದು, ನಾರುಡೆಯನ್ನು ಉಟ್ಟು, ಆಧ್ಯಾತ್ಮ ಚಿಂತನೆಯಲ್ಲಿ ಕಾಲವನ್ನು ಕಳೆಯುತ್ತಿದ್ದ ಋಷಿಗಳೇ ಜ್ಯೋತಿಷ್ಯ, ಗಣಿತ, ಸಂಗಿತ, ಶಿಲ್ಪ, ಚಿತ್ರಕಲೆ, ವೈದ್ಯ, ರಾಜನೀತಿ-ಮುಂತಾದ ಲೌಕಿಕವಿಷಯಗಳಲ್ಲಿಯೂ ಗ್ರಂಥಗಳನ್ನು ಬರೆದು ಲೊಕೋಪಕಾರವನ್ನು ಮಾಡಿರುತ್ತಾರೆ. ಧರ್ಮಾರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥ ಚತುಷ್ಟಯವು ಅಧಿಕಾರ ತಾರತಮ್ಯದಿಂದ ಜನರಿಗೆ ಬೇಕಾಗಿವೆ ಎಂಬುದನ್ನು ಒಪ್ಪಿ, ಅವರವರ ಅಭಿರುಚಿಗೆ ತಕ್ಕಂತೆ ಅವರವರಿಗೆ ಬೇಕಾದ ತಿಳಿವಳಿಕೆಯನ್ನು ಒದಗಿಸಿಕೊಟ್ಟಿರುತ್ತಾರೆ. ಇಹಪರ ಲೋಕಗಳ ಸುಖವನ್ನು ಭೋಗಿಸುವದರಲ್ಲಿ ವಿರಕ್ತನಾದವನೇ ವೇದಾಂತ ವಿಜ್ಞಾನಕ್ಕೆ ಅಧಿಕಾರಿಯಾಗಿರುತ್ತಾನೆಂಬ ತ್ತತ್ವವನ್ನು ಅವಲಂಬಿಸಿದ್ದರಿಂದ ಸನಾತನ ಧರ್ಮದಲ್ಲಿ ಧರ್ಮವಿರುದ್ಧವಾದ ಅರ್ಥಕಾಮಗಳ ವಿಷಯದ ತಿಳಿವಳಿಕೆಯು ಮೊದಲು ಎಲ್ಲರಿಗೂ ಅತ್ಯವಶ್ಯವೆಂಬುದು ಧರ್ಮಶಾಸ್ತ್ರ ಪ್ರವರ್ತಕರಿಗೂ ಒಪ್ಪಿತವಾದ ಜೀವನಸೂತ್ರವಾಗಿರುತ್ತದೆ.

ಇನ್ನೊಂದು ಮಾತು. ವೇದಾಂತವೆಂಬುದು ಸರ್ವಶಾಸ್ತ್ರಗಳಿಂದಲೂ ವೇದ್ಯವಾಗಿರುವ ವಿಷಯಗಳ ತಿರುಳನ್ನೇ ಕುರಿತದ್ದಾಗಿತ್ತದೆ. ಏಕೆಂದರೆ ಯಾವದೊಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ಆಗುತ್ತದೆ ಎಂಬುದೇ ವೇದಾಂತದಲ್ಲಿ ಹೇಳಿರುವ ಬ್ರಹ್ಮವಿದ್ಯೆಯ ಪ್ರಥಮ ಪ್ರಶ್ನೆ. 'ಸ ಬ್ರಹ್ಮ ವಿದ್ಯಾಂ

ಸರ್ವವಿದ್ಯಾ ಪ್ರತಿಷ್ಠಾಮಥರ್ವಾಯ ಜ್ಯೇಷ್ಠ ಪುತ್ರಾಯ ಪ್ರಾಹ' (ಮುಂ, ೧-೧-೨) ಸರ್ವವಿದ್ಯೆಗಳ ಅಭಿವ್ಯಕ್ತಿಗೂ ಕಾರಣವಾಗಿ, ಸರ್ವವಿದ್ಯೆಗಳಿಗೂ ಆಶ್ರಯವಾಗಿ, ಸರ್ವವಿದ್ಯೆಗಳಿಂದಲೂ ಕೊನೆಯಲ್ಲಿ ತಿಳಿಯಬೇಕಾಗಿರುವ ವಸ್ತುತತ್ತ್ವವನ್ನೇ ತಿಳಿಸುವುದರಿಂದ ವೇದಾಂತದಲ್ಲಿ ಹೇಳಿರುವ ಬ್ರಹ್ಮವಿದ್ಯೆಗೆ 'ಸರ್ವವಿದ್ಯಾಪ್ರತಿಷ್ಠಾ' ಎಂದು ಹೆಸರಾಗಿರುತ್ತದೆ. ಹೀಗೆ ಎಲ್ಲಾ ದೃಷ್ಟಿಯಿಂದಲೂ ಪರಿಪೂರ್ಣವಾಗಿರುವ ವೇದಾಂತಕ್ಕೆ ತನ್ನದೊಂದು ಅಂಶವಾಗಿರುವ ಭೌತಿಕ ವಿಜ್ಞಾನದ ವಿಷಯಕ್ಕೆ ವಿರೋಧವೆಲ್ಲಿಂದ ಬರಬೇಕು? ವೇದಾಂತವೆಂಬುದು ಪರಿಪೂರ್ಣಶಾಸ್ತ್ರ, ತರ್ಕಾನುಭವಗಳನ್ನು ಅನುಸರಿಸಿ ತತ್ತ್ವವನ್ನು ಶೋಧಿಸುವವರಿಗೇ ತಿಳಿಯುವ ಬ್ರಹ್ಮವಿದ್ಯೆಯನ್ನು ತಿಳಿಸುವ ಶಾಸ್ತ್ರವದು. ಹೀಗಿರುವಲ್ಲಿ ಯುಕ್ತ್ಯನುಭವಗಳಿಗೆ ಹೊಂದುಗಡೆಯಾದದ್ದನ್ನೇ ಹಿಡಿಯಬೇಕೆಂಬ ಸೂತ್ರವನ್ನನುಸರಿಸುವ ಲೌಕಿಕವಿಜ್ಞಾನ ಶಾಸ್ತ್ರಕ್ಕೆ ಅದು ಹೇಗೆ ತಾನೆ ಅಡ್ಡ ಬಂದೀತು?

ಜ್ಞೇಯದ ಏಕದೇಶವನ್ನು ಮಾತ್ರ ವಿಷಯೀಕರಿಸಿ ವಿಚಾರಕ್ಕೆ ಹೊರಟಿರುವ ಕಾರಣದಿಂದ ಮಾತ್ರವೇ ಅಲ್ಲ. ಅದು ಅವಲಂಬಿಸಿರುವ ದೃಷ್ಟಿ ವಿಶೇಷದಿಂದ ಮತ್ತು ಪ್ರಕ್ರಿಯಾ ವಿಶೇಷದಿಂದ ನೋಡಿದರೂ ಭೌತಿಕ ವಿಜ್ಞಾನ ಶಾಸ್ತ್ರವು ವೇದಾಂತಕ್ಕೆ ಅವಿರುದ್ಧವಾಗಿರುತ್ತದೆ. ಭೌತಿಕಶಾಸ್ತ್ರಕ್ಕೆ 'ಪರಾಗ್ದೃಷ್ಟಿ' (ಹೊರಗಣ್ಣು) ಮುಖ್ಯ ಇಂದ್ರಿಯಗಳಿಂದಲೂ ಇಂದ್ರಿಯಗಳಿಗೆ ಸಹಕಾರಿಯಾಗಿರುವ ಯಂತ್ರಾದ್ಯುಪಕರಣಗಳಿಂದಲೂ ಜ್ಞೇಯವಸ್ತುಗಳನ್ನು ಬಗೆಬಗೆಯಾಗಿ ನಿಟ್ಟಿಸಿನೋಡಿ, ಬಗೆಬಗೆಯ ಪ್ರಯೋಗಗಳಿಂದ ಅವುಗಳ ಸ್ವಭಾವವನ್ನು ಪರೀಕ್ಷಿಸಿ, ಹಾಗೆ ಪರೀಕ್ಷಿಸಿ ಕಂಡುಕೊಂಡದ್ದನ್ನು ಸಜಾತೀಯವಾದ ಮಿಕ್ಕ ಜ್ಞಾತತತ್ತ್ವಗಳಿಗೆ ಅರಿಯುವಾತನ ತತ್ತ್ವವಾದ ಆತ್ಮನೇ ಅದಕ್ಕೆ ವಿಷಯ. ಆತ್ಮ ತತ್ತ್ವವನ್ನು ಪರಿಶೀಲಿಸುವದಕ್ಕೆ ಅದು ಅವಲಂಬಿಸಿರುವುದು ಪರಾಗ್ದೃಷ್ಟಿಯಲ್ಲ, ಪ್ರತ್ಯಗ್ದೃಷ್ಟಿ (ಒಳಗಣ್ಣು). ಆ ದೃಷ್ಟಿಗೆ ಮತ್ತೆ ಯಾವ ಸಾಧನಗಳೂ ಬೇಕಿರುವದಿಲ್ಲ. ಅದಕ್ಕೆ ನೇರವಾದ ಅನುಭವವೇ ಸಾಕಾಗಿರುತ್ತದೆ. ಆ ದೃಷ್ಟಿಯಿಂದ ಕಂಡುಕೊಂಡ ಅನುಭವ ವಿಶೇಷಗಳನ್ನು ಒಂಕ್ಕೊಂದನ್ನು ಹೊಂದಿಸಿ ಸಿದ್ಧಾಂತವನ್ನು ಮಾಡಿಕೊಳ್ಳುವದಕ್ಕೆ ಅವಲಂಬಿಸಿರುವ ಪ್ರಕ್ರಿಯೆಯೂ ಬೇರೆಯಾಗಿರುತ್ತದೆ. ಹೀಗೆ ವಿಚಾರಣೀಯ ವಿಷಯ, ಅವಲಂಬಿಸಿರುವ ದೃಷ್ಟಿ, ವಿಮರ್ಶ ಪ್ರಕ್ರಿಯೆ ಇವುಗಳೆಲ್ಲ ಅತ್ಯಂತ ಭಿನ್ನವಾಗಿರುವುದರಿಂದಲೂ ವೇದಾಂತವಿಜ್ಞಾನ ಶಾಸ್ತ್ರಗಳಿಗೆ ಎಲ್ಲಾ ಬಗೆಯಿಂದಲೂ ಅವಿರೋಧವಿರುತ್ತದೆ.

ಇಲ್ಲೊಂದು ಪ್ರಶ್ನೆ; ವೇದಾಂತಕ್ಕೂ ವಿಜ್ಞಾನಶಾಸ್ತ್ರಕ್ಕೂ ಹೀಗೆ ವಿಷಯಗಳು ಬೇರೆಬೇರೆಯೇ ಆಗಿದ್ದರೆ ವಿಜ್ಞಾನಶಾಸ್ತ್ರದ ವಿಷಯವನ್ನು ತನ್ನಲ್ಲಿ ಅಡಕ ಮಾಡಿಕೊಂಡಿರುವದೆಂಬ ಹೇಳಿಕೆ ಹೇಗೆ ಸರಿ? ಈ ಎರಡು ಶಾಸ್ತ್ರಗಳ ವಿಷಯಗಳೂ ಬೇರೆ ಬೇರೆಯೇ ಆಗಿರುವದರಿಂದ ಇವೆರಡೂ ಬೇರೆ ಬೇರೆಯೇ ಎಂದು ತಿಳಿಯುವದು ಯುಕ್ತವಲ್ಲವೆ? ಈ ಎರಡು ಶಾಸ್ತ್ರಗಳೂ ಅವಲಂಬಿಸಿರುವ ದೃಷ್ಟಿಗಳೂ ಪೂರ್ವಪಶ್ಚಿಮಗಳಂತೆ ವಿರುದ್ಧವಾದ ದಿಕ್ಕಿನಲ್ಲಿ ಹೊರಟಿರುವದರಿಂದ ಇವೆರೆಡರ ಫಲಿತಾಂಶಗಳೂ ವಿರುದ್ಧವಾಗಿಯೇ ಇರಬೇಕಲ್ಲವೆ? ಈ ಎರಡು ದೃಷ್ಟಿಗಳೊಳಗೆ ಯಾವುದು ಸರಿಯಾದುದು ಎಂಬುದನ್ನು ನಿಶ್ಚಯಿಸಿಕೊಳ್ಳದೆ ಎರಡೂ ಒಂದೇ

ಎಂದು ಹೇಳುವದು ಯುಕ್ತವಾದೀತೆ? ಭೌತಿಕವಿಜ್ಞಾನ ಶಾಸ್ತ್ರವು ಕಂಡು ಹಿಡಿದಿರುವ ಹೊಸಹೊಸ ಸಾಧನಗಳು ಮನುಷ್ಯ ಜೀವನಕ್ಕೆ ಹೊಸಹೊಸ ಮೆರುಗನ್ನು ಕೊಟ್ಟು ಉಪಕಾರವನ್ನು ಕಂಡು ಹಿಡಿದಿದೆ?

ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವದಕ್ಕೆ ಅನುಕೂಲಿಸುವ ಒಂದು ದೃಷ್ಟಾಂತವನ್ನು ಕೊಡಬಹುದು. ವಿಜ್ಞಾನ ಶಾಸ್ತ್ರದಲ್ಲಿಯೇ ಏಕದೇಶವಾಗಿರುವ ಪದಾರ್ಥ ಸ್ವಭಾವಶಾಸ್ತ್ರ, ಪದಾರ್ಥರಚನಾಶಾಸ್ತ್ರ ಇವೆರಡೂ ಒಂದೇ ವಸ್ತುವನ್ನು ಕುರಿತು ವಿಚಾರ ಮಾಡಿದರೂ ವಸ್ತುವಿನ ಸ್ವಭಾವ, ಶಕ್ತಿ, ಬಗೆಬಗೆಯ ಶಕ್ತಿಗಳಿಂದ ವಸ್ತುವಿನ ಮೇಲೆ ಆಗುವ ಪರಿಣಾಮ– ಇಂಥ ಹೊರಗಿನ ವಿಚಾರವನ್ನೇ ಮೊದಲನೆಯ ಶಾಸ್ತ್ರವಿಭಾಗವು ಕೈಗೊಂಡಿರುತ್ತದೆ; ಆ ವಸ್ತುವನ್ನು ವಿಶ್ಲೇಷಣ ಮಾಡಿ ಅದರೊಳಗಿನ ಮೂಲ ಧಾತುಗಳು, ಅವುಗಳು ಸಂಯುಕ್ತವಾಗಿ ವಸ್ತು ರಚನೆಯಾಗಿರುವ ಕ್ರಮ, ಆಧಾತುಗಳಲ್ಲಿ ಬೇರೆ ಬೇರೆಯ ಉಪಾಧಿಯಿಂದಾಗುವ ವಿಶೇಷ ವಿಕ್ರಯೆಗಳು ಇಂಥ ಒಳಗಿನ ವಿಚಾರವನ್ನೇ ಎರಡನೆಯ ಶಾಸ್ತ್ರವು ಕೈಕೊಂಡಿರುತ್ತದೆ. ಅಲ್ಲವೆ? ಇದರಂತೆ ಲೌಕಿಕ ವಿಜ್ಞಾನಶಾಸ್ತ್ರವು ಪರಾಗ್ದೃಷ್ಟಿಯಿಂದ ಪ್ರಪಂಚದ ತಿರುಳಾದ ಪರಮಾರ್ಥದ ಒಂದೊಂದು ವಿಶೇಷವನ್ನು ತಿಳಿಸಿಕೊಡುವ ಅನೇಕ ಶಾಸ್ತ್ರವಿಭಾಗಗಳಾಗಿ ಒಡೆದುಕೊಂಡು ತೋರುತ್ತಿದ್ದರೂ ವೇದಾಂತವು ಇಡಿಯ ಪ್ರಪಂಚದ ತಿರುಳನ್ನೇ ಪ್ರತ್ಯಗ್ದೃಷ್ಟಿಯಿಂದ ತಿಳಿಯಿಸಿಕೊಟ್ಟರೆ ಆ ಅರ್ಥದಲ್ಲಿ ಅದು ಆ ಎಲ್ಲಾ ವಿಷಯ ವಿಶೇಷಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಿದೆ ಎಂದು ಹೇಳಬಹುದಾಗಿದೆ; ದೃಷ್ಟಿಭೇದದಿಂದ ಫಲಭೇದವೂ ಇರಬಹುದಾಗಿದೆ. ಲೌಕಿಕವಿಜ್ಞಾನಶಾಸ್ತ್ರವು ವ್ಯವಹಾರಕ್ಕೆ ಹೊಂದುವ ಪರಾಗ್ದೃಷ್ಟಿಯನ್ನೇ ಅವಲಂಬಿಸಿರುವದರಿಂದ ವ್ಯವಹಾರದಲ್ಲಿ ಮನುಷ್ಯನ ಜೀವನಕ್ಕೆ ಆಗಬಹುದಾದ ಪ್ರಯೋಜನಗಳನ್ನು ಒದಗಿಸಿಕೊಡುತ್ತದೆ. ವೇದಾಂತವು ತತ್ತ್ವ ನಿರ್ಧಾರಣವನ್ನು ಮಾಡುವದೆಂಬ ಮಹಾಪ್ರಯೋಜನವನ್ನು ಗುರಿಯಲ್ಲಿಟ್ಟು ಕೊಂಡಿರುವದರಿಂದ ಆ ಪ್ರಯೋಜನವು ಅದರಿಂದ ಆಗಿಯೇ ಆಗುತ್ತದೆ.

ವ್ಯವಹಾರ ದೃಷ್ಟಿಯಿಂದ ನೋಡಿದರೂ ವೇದಾಂತದ ತಿಳವಳಿಯಿಂದ ಬೆಲೆಯುಳ್ಳ ಪ್ರಯೋಜನವು ಆಗುತ್ತದೆ ಎನ್ನಬೇಕು. 'ತತ್ರ ಕೋಮೋಹಃ ಕಃ ಶೋಕಃ' (ಈ ೭), 'ಅಭಯಂ ವೈಜನಕ ಪ್ರಾಪ್ತೋಸಿ' (ಬೃ.೪–೨–೪) ಮುಂತಾದ ಶ್ರುತಿಗಳು ಹೊಗಳುವಂತೆ, ಶೋಕಮೋಹ ಭಯಾದಿಗಳನ್ನು ಮೀರುವ ಉತ್ತಮಾವಸ್ಥೆಯು ವೇದಾಂತಜ್ಞಾನದಿಂದ ಬರುತ್ತದೆ. 'ಪರಾಚಃ ಕಾಮಾನನುಯನ್ತಿಬಾಲಾಸ್ತೇ ಮೃತ್ಯೋರ್ಯನ್ತಿ ವಿತತಸ್ಯ ಪಾಶಮ್। ಅಥ ಧಿರಾ ಅಮೃತತ್ವಂ ವಿದಿತ್ವಾ ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯನ್ತೇ।

'ಅವಿವೇಕಿಗಳು ಹೊರಗಿನ ಕಾಮಗಳನ್ನೇ ಅನುಸರಿಸಿ ಮೃತ್ಯುವಿನ ಬಲೆಯೊಳಕ್ಕೆ ಬೀಳುವರು; ವಿವೇಕಿಗಳಾದವರು ಅಮೃತತ್ತ್ವವನ್ನು ಅರಿತುಕೊಂಡು ಈ ಸಂಸಾರದಲ್ಲಿ ಏನನ್ನೂ ಪ್ರಾರ್ಥಿಸದೆ ಇರುವರು' ಎಂದು ಶ್ರುತಿಯು ಹೇಳುವುದು ಉಪಚಾರದ ಮಾತಲ್ಲ. ಧರ್ಮಾರ್ಥ ಕಾಮಗಳೆಂಬ ತ್ರಿವರ್ಗವನ್ನು ಅನುಭವಿಸಿ ಇಹಪರ ಸುಖಗಳಿಗೆ ಬೇಸತ್ತಿರುವ ವಿವೇಕಿಗಳಾದ ಮುಮುಕ್ಷುಗಳು ಈ ಲೋಕದಲ್ಲಿ ತಮ್ಮ ಶರೀರೇಂದ್ರಿಯಾದಿಗಳೇ ತಾವು, ತಮ್ಮವು ಎಂಬ

ಅವಿದ್ಯೆಯಿರುವವರಿಗೆ ಹೊರಗಿನ ವಸ್ತುಗಳು ಭೋಗದಲ್ಲಿ ಕಾಮವಿರುವದು. ಅದಕ್ಕಾಗಿ ಅವರು ಕರ್ಮವನ್ನು ಮಾಡುವರು. ಧರ್ಮಕ್ಕೂ ಹೊರತಾದ ಅರ್ಥಕಾಮಗಳನ್ನು ಬಯಸುವ ಅವಿವೇಕಿಗಳಲ್ಲದೆ, ಅವಿದ್ಯಾಕಾಮಕರ್ಮಗಳೆಂಬ ಮೃತ್ಯುವಿನ ಬಲೆಯಲ್ಲಿ ಬೀಳುತ್ತಿರುವರು? ಈಗ ಭೌತಿಕವಿಜ್ಞಾನವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವ ಜನರೂ ಜನಾಂಗಗಳೂ ಜಗತ್ತನ್ನೇ ನಾಶಮಾಡುವ ಅಸುರ ಸಂಪತ್ತಿಗೊಳಗಾಗಿ ಎಲ್ಲರನ್ನೂ ಅಪಾರವಾದ ಅಂಜಿಕೆಯ ಕಡಲಿನಲ್ಲಿ ಮುಳುಗಿಸುತ್ತಿರುವವಲ್ಲವೆ? ವಿವೇಕಿಗಳಾದವರು 'ಮೃತ್ಯುವಿನ ಬಲೆಯಿಂದ ಪಾರಾಗುವದಕ್ಕೆ ಧರ್ಮವೊಂದೇ ಉಪಯ, ಆ ಧರ್ಮವನ್ನು ಅನುಸರಿಸುವದಕ್ಕೆ ವೇದಾಂತಜ್ಞಾನವೊಂದೇ ಶರಣು'– ಎಂದು ತಿಳಿದರೆ ಆಶ್ಚರ್ಯವೇನು?

ವೇದಾಂತಜ್ಞಾನವು ಕಾಲದೇಶ ನಿಮಿತ್ತಗಳಿಂದ ಮಾರ್ಪಡುವುದಲ್ಲ. ಕಾಲದೇಶಾತೀತವಾದ ಪರಮಾರ್ಥವನ್ನೇ ಅದು ತಿಳಿಸುವದಕ್ಕೆ ಹೊರಟಿರುವದು. ಆದ್ದರಿಂದ ಅದನ್ನು ಕಾಲಕ್ಕೆ ತಕ್ಕಂತೆ ವಿಜ್ಞನ ಶಾಸ್ತ್ರಕ್ಕೆ ಹೊಂದಿಸಿಕೊಳ್ಳಬೇಕೆಂದು ಬಗೆಯುವದು ಸರಿಯಲ್ಲ. ಕಾಲಕಾಲಕ್ಕೆ ಮಾರ್ಪಡುತ್ತಿರುವ ವಿಜ್ಞಾನಶಾಸ್ತ್ರವೇ ಕೂಟಸ್ಥನಿತ್ಯವಾದ ತತ್ತ್ವವನ್ನು ತಿಳಿಸಿಕೊಡುವ ವೇದಾಂತ ಶಾಸ್ತ್ರವನ್ನು ಅವಲಂಬಿಸಿಕೊಂಡು ಅದರ ಮಾರ್ಗದರ್ಶಿತ್ವದ ಬೆಳಕಿನಲ್ಲಿಯೇ ಪ್ರಯೋಜನವನ್ನು ಜನರಿಗೆ ಮಾಡಿಕೊಡುತ್ತಾ ಬಂದರೆ ಸರ್ವರಿಗೂ ಕಲ್ಯಾಣವಾದಿತು.

(ಸಾಭಾರ : ಕಸ್ತೂರಿ)

* * *

ಮನುಷ್ಯನಿಗೆ ಸರಳತೆ ಶೋಭೆ ಕೊಡುತ್ತದೆ. ದರಿದ್ರತೆ ಇರಕೂಡದೆಂಬುದು ಸರಿ, ಸಮೃದ್ಧಿಯಿರಬೇಕು. ಆದರೂ ಸರಳತೆಯ ಅಗತ್ಯವಿದೆ. ನಾವು ಸರಳವಾಗಿರುವಾಗ ನಮ್ಮ ಹೆಚ್ಚಿನ ಗಮನ ಹೊರಗಿನ ಪದಾರ್ಥಗಳಲ್ಲಿ ತೊಡಗುವುದಿಲ್ಲ. ಹೃದಯದೊಳಗೆ ಧ್ಯಾನ ಲಭಿಸುವುದು, ಹೆಚ್ಚು ಯೋಚನೆ ಮಾಡಬಹುದು. ಜನರು ಹಣ ಸಂಗ್ರಹಿಸತೊಡಗಿದಾಗ ಒಳಗಿನ ವಿಷಯವನ್ನು ಕಾಣರು. ಒಳಗಿನ ಆನಂದವನ್ನು ಗುರುತಿಸಲಾರರು. ಹೊರಗಿನ ಪದಾರ್ಥಗಳನ್ನೇ ಗಮನಿಸುತ್ತಾರೆ. ಸತತ ರೇಡಿಯೋದ ಹಾಡು ಕೇಳುತ್ತಾರೆ. ಆದರೆ ಹೃದಯದ ಒಳಗಿನ ಶ್ವಾಸೋಚ್ಛ್ವಾಸದ ಸುಂದರ ವೀಣೆ ನುಡಿಯುತ್ತಿದೆ, ಅದನ್ನು ಕೇಳಲಾರರು. ದರಿದ್ರತೆಯಲ್ಲಿ ಧ್ಯಾನ ಲಭಿಸುವುದಿಲ್ಲ ಮತ್ತು ಪ್ರಚುರತೆಯಲ್ಲಿ ವ್ಯಕ್ತಿ ಅಂತರ್ಮುಖಿಯಾಗಲಾರ. ಆದ್ದರಿಂದ ಸಮತ್ವದ ಅವಶ್ಯಕತೆಯಿದೆ. ಜೀವನದಲ್ಲಿ ಸಮತ್ವ ಮತ್ತು ಸರಳತೆಯಿರಲಿ.

– ವಿನೋಬಾ

ಅಪೂರ್ವ ವಿದ್ವಾಂಸ ಪ್ರೊ.ಎನ್. ಬಾಲಸುಬ್ರಹ್ಮಣ್ಯ

– ಕೆ.ಆರ್.ಮೋಹನ್

ವೇದಾಧ್ಯಯನ ಸಂಪನ್ನರೂ, ಸದಾಚಾರನಿಷ್ಠರೂ, ಆಹಿತಾಗ್ನಿಗಳೂ ಮತ್ತು ಶಾಸ್ತ್ರ ವಿದ್ಯಾಸಂಪನ್ನರೂ ಆದ ವಿದ್ವನ್ಮನೆತನದಲ್ಲಿ ೨-೧-೧೯೨೬ರಲ್ಲಿ ನಂಜನಗೂಡಿನಲ್ಲಿ ಶ್ರೀ ನಂ.ಬಾಲಸುಬ್ರಹ್ಮಣ್ಯರವರ ಜನನವಾಯಿತು. ಮನೆಯಲ್ಲಿ ನಡೆಯುತ್ತಿದ್ದ ವೇದಾಧ್ಯಯನ ಮತ್ತು ಶಾಸ್ತ್ರ ಚಿಂತನೆಗಳು ಸ್ವಾಭಾವಿಕವಾಗಿ ಶ್ರೀ ಬಾಲಸುಬ್ರಹ್ಮಣ್ಯರವರ ಮೇಲೆ ಬಾಲ್ಯದಲ್ಲಿಯೇ ಅಗಾಧವಾದ ಪರಿಣಾಮ ಬೀರಿದವು. ಸಂಸ್ಕೃತ ವಿದ್ಯಾಭ್ಯಾಸವೂ ಮನೆಯಲ್ಲಿಯೇ ನಡೆಯಿತು. ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ನಂಜನಗೂಡಿನಲ್ಲಿ ಮಾಡಿ, ಅನಂತರ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಆಂಗ್ಲಭಾಷಾ ಸಾಹಿತ್ಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಉನ್ನತ ವ್ಯಾಸಂಗ ಮಾಡಿ, ಉತ್ತಮ ದರ್ಜೆಯಲ್ಲಿ ಎಂ.ಎ. ಪದವಿಯನ್ನು ೧೯೪೭ರಲ್ಲಿ ಪಡೆದರು. ಅನಂತರ ಮಹಾರಾಜಾ ಕಾಲೇಜಿನಲ್ಲಿಯೇ ಆಂಗ್ಲಭಾಷಾ ಅಧ್ಯಾಪಕರಾಗಿ ಸೇರಿ, ೧೯೮೬ರಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತಿಯಾದರು. ಬಾಲ್ಯದಲ್ಲಿ ಶಾಸ್ತ್ರ ಚಿಂತನಾಗೋಷ್ಠಿಗಳಿಂದ ಪ್ರಭಾವಿತರಾಗಿದ್ದ ಇವರಿಗೆ ಮುಂದೆ ತೀಕ್ಷ್ಣವಾದ ವಿಮರ್ಶಾದೃಷ್ಟಿಯನ್ನು ಬೆಳೆಸಿಕೊಳ್ಳುವುದಕ್ಕೆ ಅತ್ಯಂತ ಸಹಕಾರಿಯಾಯಿತು. ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ದಿನಗಳಲ್ಲಿ ಡಿ.ಎಲ್.ನರಸಿಂಹಾಚಾರ್, ಟಿ.ಎನ್.ಶ್ರೀಕಂಠಯ್ಯ, ನಂ.ಶಿವರಾಮಶಾಸ್ತ್ರಿ, ಎ.ಎನ್.ಮೂರ್ತಿರಾಯರು, ಎಂ.ರಾಮರಾವ್, ಆರ್. ಗುರುರಾಜಾರಾವ್, ಸಿ.ಡಿ.ಗೋವಿಂದರಾವ್ ಮುಂತಾದ ಶ್ರೇಷ್ಠ ವಿದ್ವಾಂಸರ ಸಹವಾಸದಿಂದ ಇವರ ವಿದ್ವತ್ತು ವಿಸ್ತಾರ ಹಾಗೂ ಆಳವಾಗಿ ಬೆಳೆಯಿತು. ಜೊತೆಗೆ ಸಂಪ್ರದಾಯನಿಷ್ಠ ಶ್ರೇಷ್ಠ ವಿದ್ವಾಂಸರಾಗಿದ್ದ ಶೃಂಗಗಿರಿ ಕವಿ ನರಸಿಂಹಶರ್ಮರಲ್ಲಿ ಶ್ರೀಶಾಂಕರ ಭಾಷ್ಯಗಳ ಪಾಠ ಮತ್ತು ಭಾಷ್ಯ ಶಾಂತಿ ನಡೆಯಿತು. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗಲೇ ಎರವಲು ಸೇವೆಯ ಮೇಲೆ ಕೇಂದ್ರ ಸರ್ಕಾರದ ಯೂನಿಯನ್ ಪಬ್ಲಿಕ್ ಸರ್ವೀಸ್ ಕಮೀಷನ್ನಿನಲ್ಲಿ (೧೯೭೦-೧೯೭೪) ನಾಲ್ಕು ವರ್ಷಗಳೂ ಸೀನಿಯರ್ ರಿಸರ್ಚ್ ಆಫೀಸರ್ ಆಗಿ ಕೆಲಸ ಮಾಡಿದರು. ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ವತಿಯಿಂದ ಪ್ರಕಟವಾಗಿರುವ ಇಂಗ್ಲೀಷ್-ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿ ಕೆಲಸ ಮಾಡಿದರು. ಗ್ರೀಕ್ ಭಾಷೆಯನ್ನು ಕಲಿತು ಅರಿಸ್ಟಾಟಲನ ಕಾವ್ಯ ಮಿಮಾಸಂಸೆಯನ್ನು ಮೂಲದಿಂದ ಕನ್ನಡಕ್ಕೆ ಅನುವಾದ ಮಾಡಿದರು. ಹಾಗೆಯೇ ಹೊರೇಸನ ಕಾವ್ಯ ವಿಮರ್ಶೆ, ಲಾಂಜೈನಸನ ಔಚಿತ್ಯ

ವಿಚಾರ ಚರ್ಚೆ, ಫಿಲಿಪ್ ಸಿಡ್ನಿಯ ಕಾವ್ಯ ಸಮರ್ಥನೆ, ಇವುಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಈ ಅನುವಾದಗಳ ವೈಶಿಷ್ಟ್ಯವೇನೆಂದರೆ– ಭಾರತೀಯ ಅಲಂಕಾರ ಶಾಸ್ತ್ರದ ಸಿದ್ಧಾಂತಗಳನ್ನು ಸಂವಾದಿಯಾಗಿ ಟಿಪ್ಪಣಿಗಳಲ್ಲಿ ಕೊಟ್ಟಿರುವುದು. ಇವಲ್ಲದೆ, ಶ್ರೀಶಾಂಕರ ಭಾಷ್ಯಗಳ ಸಾಂಪ್ರದಾಯಿಕ ಅಧ್ಯಯನದ ಫಲವಾಗಿ ಅತ್ಯಂತ ಉಪಯುಕ್ತವಾದ ಟಿಪ್ಪಣಿಗಳೊಡನೆ ಶ್ರೀ ಸದಾನಂದರ ವೇದಾಂತ ಸಾರವನ್ನು ಅನುವಾದ ಮಾಡಿರುತ್ತಾರೆ. ರೈಸ್ ಸಂಪಾದಿತ ಅಮರಕೋಶದ ಪರಿಷ್ಕೃತ ಆವೃತ್ತಿ, ಇಂಗ್ಲೀಷ್–ಇಂಗ್ಲೀಷ್–ಕನ್ನಡ ನಿಘಂಟು (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್). ದೆಹಲಿಯ ಕೇಂದ್ರ ಸಾಹಿತ್ಯ ಅಕಾಡಮಿಗಾಗಿ ಅಭಿನವ ಗುಪ್ತನನ್ನು ಕುರಿತ ಇಂಗ್ಲಿಷ್ ಗ್ರಂಥದ ಕನ್ನಡ ಅನುವಾದ ಮತ್ತು ಪ್ರೊ. ತೀ.ನಂ. ಶ್ರೀಕಂಠಯ್ಯನವರ ಮೇರುಕೃತಿಯಾದ ಭಾರತೀಯ ಕಾವ್ಯ ಮಿಮಾಂಸಾ ಗ್ರಂಥವನ್ನು indian poetics ಎಂಬ ಶೀರ್ಷಿಕೆಯಲ್ಲಿ ಇಂಗ್ಲೀಷಿಗೆ ಅನುವಾದ ಮಾಡಿದರು. ಇವಲ್ಲದೆ ಇನ್ನೂ ಹಲವಾರು ಗ್ರಂಥಗಳನ್ನು ರಚಿಸಿದರು. ಹಾಗೂ ಅವು ಪ್ರಕಟವಾಗಿವೆ.

ಇಂತಹ ಬಹುಶ್ರುತ ವಿದ್ವಾಂಸರನ್ನು ಪ್ರಶಸ್ತಿಗಳು ಆರಿಸಿಕೊಂಡು ಬರುವುದು ಸ್ವಾಭಾವಿಕ. ಇವರಿಗೆ ಎರಡು ಬಾರಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ. ಡಾ.ಜಿಎಸ್.ಶಿವರುದ್ರಪ್ಪ ಪ್ರಶಸ್ತಿ, ಡಾ. ಟಿ.ವಿ.ವೆಂಕಟಾಚಲಶಾಸ್ತ್ರಿಗಳ ವಿದ್ವತ್ ಪ್ರಶಸ್ತಿ, ವಿದ್ಯಾಸಾಗರ ಪ್ರೊ.ಎಂ.ಪಿ.ಎಲ್.ಶಾಸ್ತ್ರಿ ವಿದ್ವತ್ ಸನ್ಮಾನ, ಸೇಡಿಯಾಪು ಕೃಷ್ಣಭಟ್ ಪ್ರಶಸ್ತಿ, ರಾಜ್ಯ ಅನುವಾದ ಅಕಾಡೆಮಿಯ ಪ್ರಶಸ್ತಿ, ಮುಂತಾದವು.

ಅವಿರತ ಕಾರ್ಯಗಳ ಮಧ್ಯದಲ್ಲಿ ಸಮರ್ಥ ಗುರುಗಳಿಂದ ಶ್ರೀವಿದ್ಯಾ ಉಪದೇಶವನ್ನು ಪಡೆದು ಅದಕ್ಕೆ ಸಂಬಂಧಿಸಿದ ಗ್ರಂಥಗಳೆಲ್ಲವನ್ನೂ ಕೂಲಂಕುಷವಾಗಿ ಅಧ್ಯಯನ ಮಾಡಿ, ಶ್ರೀಚಕ್ರಾರ್ಚನೆಯನ್ನು ಅನುಷ್ಠಾನದಲ್ಲಿಟ್ಟುಕೊಂಡಿದ್ದರು.

ಪ್ರಾಚ್ಯ–ಪಾಶ್ಚಾತ್ಯ ಸಾಹಿತ್ಯಗಳ ಸಂಗಮದಂತಿದ್ದ ಶ್ರೀ ಬಾಲಸುಬ್ರಹ್ಮಣ್ಯ ಅವರು ಇದೇ ಜೂನ್ ೧೬ರಂದು ಕೇರಳದ ಕಲ್ಲಿಕೋಟೆಯಲ್ಲಿ ನಿಧನರಾದರು. ಬದುಕಿದ್ದಾಗಲೂ ಸುದ್ದಿಯ ಸದ್ದುಗದ್ದಲಗಳಿಂದ ದೂರವೇ ಉಳಿದಿದ್ದ ಈ ಶ್ರೇಷ್ಠ ವಿದ್ವಾಂಸ ಸಾವಿನಲ್ಲೂ ಕೂಡ ಇದೇ ಏಕಾಂತವನ್ನು ಉಳಿಸಿಕೊಂಡರು. ಅವರಿಗೆ ನಮೋ ನಮಃ.

* * *

ವಿರೋಧಕ್ಕೆ ಹೆದರಬೇಡಿ. ವಿರುದ್ಧ ದಿಕ್ಕಿನ ಗಾಳಿಯನ್ನವಲಂಬಿಸಿಯೇ ಗಾಳಿಪಟ ಮೇಲೆ ಹಾರುತ್ತದೆ ಎಂಬುದನ್ನು ನೆನಪಿಸಿಕೊಳ್ಳಿ.

- ಹ್ಯಾಮಿಲ್ಟನ್ ಮಾಬಿ

ಪುಸ್ತಕ ಪರಿಚಯ

ಗ್ರಾಮತೀಕರಣದಿಂದ – ಜಾಗತೀಕರಣದ ಕಡೆಗೆ

ಪುಸ್ತಕದ ಹೆಸರು : **ಚರ್ನಿಂಗ್ ಆಫ್ ದಿ ಅರ್ಥ್**

ಲೇಖಕರು : ಆಸೀಮಾ ಶ್ರೀ ವಾತ್ಸವ ಆಶೀಶ್ ಕೊಠಾರಿ

ಬೆಲೆ : ೬೯೯ರೂ. ಪುಟಗಳು : ೪೧೬

ಕಳೆದ ಎರಡು ದಶಕಗಳಲ್ಲಿಯ ಭಾರತದ ಆರ್ಥಿಕ ಅಭಿವೃದ್ಧಿ ಜಗತ್ತನ್ನು ಬೆರಗುಗೊಳಿಸಿದೆ. ಭಾರತೀಯ ಲೇಖಕರು ಮತ್ತು ಇತರರು ದೇಶವನ್ನು ಭವಿಷ್ಯದ ಆರ್ಥಿಕ ಶಕ್ತಿಗಳ ಪಟ್ಟಿಯ ಮೇಲೆ ಇರಿಸಿದ್ದಾರೆ. ಯಾವುದನ್ನು ಪರಿಹಾಸ್ಯವಾಗಿ ಹಿಂದೂ ಬೆಳವಣಿಗೆಯ ಭ್ರಮೆಯೆಂದು ೧೯೯೦ರಲ್ಲಿ ಪ್ರಾರಂಭಿಕ ದಶಕಗಳಲ್ಲಿ ಕರೆಯಲಾಗಿತ್ತೊ ಆ ಭ್ರಮೆಯಿಂದ ಹೊರಬಂದ ನಂತರ ಮೊದಲು ಕಳೆದ ಹೋದ ವರ್ಷ ಮತ್ತು ದಶಕಗಳ ಬಗ್ಗೆ ಆನೇಕರು ದುಃಖ ಪಟ್ಟಿದ್ದಾರೆ. ಅದು ಜಗತ್ತಿನ ಹಿನ್ನೀರಿನಲ್ಲಿ ಮುಳುಗಿ ಹೋಗುವುದೆಂದು ಭಾವಿಸಿದ್ದರು. ಚೀನಾ ತನ್ನ ಉದಾರೀಕರಣವನ್ನು ಭಾರತವು ಪ್ರಾರಂಭಿಸಿದ ಕೆಲವು ವರ್ಷದ ನಂತರ ಪ್ರಾರಂಭಿಸಿತು. ಈಗ ಅದು ಭಾರತಕ್ಕಿಂತಲೂ ಆರ್ಥಿಕ ಶಕ್ತಿಯಲ್ಲಿ ಮತ್ತು ಅದರೊಂದಿಗೆ ಬರುವ ರಾಜಕೀಯ ಶಕ್ತಿಯಲ್ಲಿ ಮುಂದೆ ಇದೆ. ಆದರೆ ಪ್ರಚಲಿತ ಆರ್ಥಿಕ ಅಭಿವೃದ್ಧಿ ಮತ್ತು ಜಾಗತೀಕರಣದ ಶಕ್ತಿಯ ಹೊಗಳಿಕೆಗಳ ಜೊತೆಗೆ ಕೆಲವು ಅಪಸ್ವರಗಳು ಇವೆ. ಅವು ಈಗಾಗಲೇ ಒಪ್ಪಿಕೊಳ್ಳಲಾದ ಅಭಿವೃದ್ಧಿಯ ಮಾದರಿಯನ್ನು ಪ್ರಶ್ನಿಸುತ್ತಿವೆ. ಆ ಮಾದರಿ ನಮ್ಮ ದೇಶಕ್ಕೆ ಸೂಕ್ತವೇ, ಎಂದು ಸಂಶಯಿಸಲಾಗುತ್ತಿದೆ. ಆ ಸೀಮಾ ಶ್ರೀ ವಾತ್ಸವ ಮತ್ತು ಆಶೀಶ್‌ಕೊಠಾರಿ ಬರೆದಿರುವ ಚರ್ನಿಂಗ್ ಆಫ್ದಿ ಅರ್ಥ್ ಪುಸ್ತಕ ಒಂದು ಬೇರೆ ತೆರನಾದ ದೂರ ದರ್ಶಿತ್ವವನ್ನು ಕೊಡುತ್ತದೆ.

ಈ ಅಭಿವೃದ್ಧಿಯನ್ನು ಮತ್ತು ಬದಲಾವಣೆಯನ್ನು ವಿರೋಧಿಸುವವರಿಂದ ಈ ಗ್ರಂಥ ರಚನೆಯಾಗಿಲ್ಲ. ಶ್ರೀ ವಾತ್ಸವ ಓರ್ವ ಪರಿಸರ ಅರ್ಥಶಾಸ್ತ್ರಜ್ಞ, ಅವರು ಇಡೀ ಜಾಗತೀಕರಣದ ಪ್ರಕ್ರಿಯೆಯನ್ನು ಅಧ್ಯಯನ ಮಾಡಿದ್ದಾರೆ. ಕೊಠಾರಿಯವರು ಪ್ರಖ್ಯಾತ ಪರಿಸರ ಪ್ರೇಮಿಗಳ ಒಂದು ಸಮೂಹವನ್ನು ರಚಿಸಿದ್ದಾರೆ. ಆ ಸಮೂಹ ತೃಣಮೂಲದಲ್ಲಿ ನಡೆಯುತ್ತಿರುವ ಅನೇಕ ಜನತಾ ಚಳುವಳಿಗಳೊಂದಿಗೆ ಸಂಪರ್ಕ ವಿರಿಸಿಕೊಂಡಿದೆ. ಆ ಜನತೆ ಇಂದಿನ ಅಭಿವೃದ್ಧಿಯ ವಿಚಾರ ಮತ್ತು ಅನುಷ್ಠಾನದ ಬಲಿಪಶುವಾಗಿದೆ. ಲೇಖಕರ ಪ್ರಮುಖವಾದವೆಂದರೆ ಆಧುನಿಕ ಅಭಿವೃದ್ಧಿಯ ಮಾದರಿ ಅಸಮಾನತೆಯನ್ನುಂಟುಮಾಡುವಂತಾಗಿದೆ. ಏಕೆಂದರೆ ಬಡವರು ಮತ್ತು ದುರ್ಬಲರು ಆಗಿರುವಂಥ ಬಹುಸಂಖ್ಯಾತ ಜನರನ್ನು ಹೊರಗಿಟ್ಟು ಅಭಿವೃದ್ಧಿಯ ಯೋಚನೆ ಮಾಡುತ್ತದೆ. ಅಲ್ಲದೇ ಅದು ಪ್ರಾಕೃತಿಕ ಸಂಪನ್ಮೂಲಗಳನ್ನು ದೋಚುವುದರಿಂದ ಅದು ಸುಸ್ಥಿರವಾಗಿರುವುದಿಲ್ಲ. ಯಾವ ಆರ್ಥಿಕ ನೀತಿ ಬಗ್ಗೆ ವಿಶೇಷವಾಗಿ ಮಾತನಾಡಲಾಗುತ್ತಿದೆಯೋ ಅದು ದೇಶವನ್ನು ಜಾಗತೀಕ ಹಣಕಾಸಿನ ಕಪಿಮುಷ್ಠಿ ಒಳಗೆ ತಳ್ಳುತ್ತದೆ. ಅದಕ್ಕೆ ಹೆಚ್ಚು ಹೆಚ್ಚು ಲಾಭವನ್ನು ಮಾಡಿಕೊಳ್ಳಬೇಕೆಂಬ ಮೌಲ್ಯವಲ್ಲದೇ ಬೇರೆ

ಇನ್ನಾವ ಮೌಲ್ಯವೂ ಇಲ್ಲ. ಈ ಬೆಳವಣಿಗೆಯಿಂದ ಲಾಭಪಡೆಯುವ ಜನರು ಬಂಡವಾಳ ಶಾಹಿಗಳೇ ಆಗಿರುತ್ತಾರೆ. ಬಹುದೊಡ್ಡ ಸಂಖ್ಯೆಯ ಜನ ಅತ್ಯಂತ ಹೀನವಾದ ಫಲಿತಾಂಶ ಪಡೆಯುತ್ತಾರೆ. ಅಮೇರಿಕಾದಲ್ಲಿ ಬಂಡವಾಳಶಾಹಿ ಒಂದು ನಂಬುಗೆಯೇ ಆಗಿದೆ. ಆದರೆ ಅಲ್ಲಿ ಶೇ.೧ರಷ್ಟು ಜನರು ಮಾತ್ರ ೯೯ರಷ್ಟು ಜನರನ್ನು ಶೋಷಿಸುತ್ತಿದ್ದಾರೆ. ಅವರ ವಿರುದ್ಧ ಚಳುವಳಿ ನಡೆಯುತ್ತಿವೆ. ಭಾರತದಲ್ಲಿ ಇದ್ದವರ, ಇಲ್ಲದವರ ಮಧ್ಯದ ಅಂತರ ಹೆಚ್ಚಾಗಿದೆ. ಆಹಾರದ ತಲಾ ಆದಾಯ ಪ್ರಮಾಣ ಕಡಿಮೆಯಾಗಿದೆ. ಈ ಗ್ರಂಥದ ಲೇಖಕರು ಕೂಲಂಕುಷವಾಗಿ ಆ ಪರಿಸ್ಥಿತಿಯ ಅಧ್ಯಯನ ಮಾಡಿದ್ದಾರೆ. ತಾವು ಮಂಡಿಸುವ ವಾದವನ್ನು ಅಂಕಿ ಸಂಖ್ಯೆಗಳಿಂದ ಪ್ರಪಂಚವನ್ನು ವಸ್ತು ಸ್ಥಿತಿಗಳಿಂದ ಸಮರ್ಥಿಸಿಕೊಂಡಿದ್ದಾರೆ. ಕಾರ್ಪರೇಟ್ ಜಗತ್ತಿನ ನೇತೃತ್ವವನ್ನು ಹೊಂದಿರುವ ಜಾಗತೀಕರಣವು ಲಾಭಕ್ಕಾಗಿ ಜೂಜಾಡುವಂಥ ಬಂಡವಾಳಶಾಹಿ ಸಮಾಜವಾಗಿದೆ. ಕಾರ್ಪರೇಟರುಗಳ ಅನುಕೂಲಕ್ಕಾಗಿ ರಚನೆಯಾದ ಮತ್ತು ತಮ್ಮ ಜನರ ಅನುಕೂಲಕ್ಕಾಗಿ ರಚಿತವಾದ ಬಹುರಾಷ್ಟ್ರೀಯ ಕಂಪನಿಗಳ ನೀತಿಯಿಂದ ದೇಶಗಳು ನಿಯಂತ್ರಿಸಲ್ಪಡುತ್ತಿವೆ. ಜನರು ಕೇವಲ ಉಪಭೋಗಿಗಳಾಗಿರುತ್ತಾರೆ. ಜನರಿಗೆ ಆರ್ಥಿಕವಾಗಿ ಅನ್ಯಾಯ ಮಾಡುವುದಲ್ಲದೆ ಅವರ ಜೀವನ ಸಾಧನಗಳನ್ನೂ ಕೊಳ್ಳೆ ಹೊಡೆಯುತ್ತಿವೆ. ತತ್‌ಪರಿಣಾಮವಾಗಿ ಅವರನ್ನು ಬಡತನದ ರೇಖೆ ಒಳಗೆ ತಳ್ಳುತ್ತದೆ. ಈ ಆಧುನಿಕ ಅಭಿವೃದ್ಧಿಯ ಮಾದರಿ ಅತ್ಯಂತ ಕ್ರೂರವಾಗಿ ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡುತ್ತದೆ. ಅದರಿಂದಾಗಿ ದೊಡ್ಡ ಪ್ರಮಾಣದ ಪರಿಸರತ್ಮಾಕ ಅಸಮತೋಲನ ಉಂಟಾಗುತ್ತದೆ. ಮತ್ತು ಪ್ರಕೃತಿಯನ್ನು ಅಪಾಯದ ಅಂಚಿಗೆ ತಳ್ಳುತ್ತದೆ. ಸಂಪನ್ಮೂಲಗಳು ಶ್ರೀಮಂತ ದೇಶಗಳಿಗೆ ವರ್ಗಾಯಿಸಲ್ಪಡುತ್ತದೆ. ಅದಕ್ಕೆ ಅನುಗುಣವಾದ ಕಾನೂನ್ನು ವಾಣಿಜ್ಯ ಒಪ್ಪಂದಗಳಿಗೂ ಹಾಗೂ ಆರ್ಥಿಕ ಪ್ರೇರಕಗಳನ್ನು ರಚಿಸಿ ರಫ್ತನ್ನು ಉತ್ತೇಜಿಸಲಾಗುತ್ತದೆ. ಬಹುರಾಷ್ಟ್ರೀಯ ಗಣಿ ಕೈಗಾರಿಕೆ ಕಂಪನಿಗಳು ಭಾರತದಲ್ಲಿ ಹೆಚ್ಚಾಗುತ್ತಿವೆ. ರಾಜಕಾರಣಿಗಳು, ಅಧಿಕಾರ ಶಾಹಿಯ ಮತ್ತು ಕಾರ್ಪರೇಟ್ ಕಂಪನಿಗಳು ಈ ಲೂಟಿಯನ್ನು ಬಳಸುತ್ತವೆ. ಅದರಿಂದಾಗಿ ಬಹಳ ತೀವ್ರವಾದ ಪರಿಸರತ್ಮಾಕ ಅವನತಿಗೆ ಕಾರಣವಾಗುತ್ತದೆ. ಭೂಮಿಯಂಥ ಸಂಪನ್ಮೂಲವನ್ನು ಸಾರ್ವಜನಿಕ ಉದ್ದೇಶಕ್ಕೆಂದು ಲಪಟಾಯಿಸಲಾಗುತ್ತಿದೆ. ವಾಸ್ತವವಾಗಿ ಕಾರ್ಪರೇಟ್ ಸಂಸ್ಥೆಗಳ ವಾಣಿಜ್ಯೋದ್ಯಮಿಗಳ ಮತ್ತು ಸಮಾಜದ ಶ್ರೀಮಂತವರ್ಗದ ಹಿತಾಸಕ್ತಯೇ ಅಲ್ಲಿರುತ್ತದೆ. ಕಾಡುಗಳನ್ನು ನಾಶಮಾಡಲಾಗುತ್ತದೆ. ಯಾರು ಅವುಗಳನ್ನು ತಮ್ಮ ಜೀವನಕ್ಕಾಗಿ ಅವಲಂಭಿಸಿರುತ್ತಾರೋ ಅವರನ್ನು ಅನಾಥವಾಗಿ ಮಾಡುತ್ತವೆ. ಈ ಗ್ರಂಥದ ಲೇಖಕರು ತಮ್ಮ ಈ ವಾದವನ್ನು ಮನವರಿಕೆ ಆಗುವ ರೀತಿಯಲ್ಲಿ ಸಾಕ್ಷಾಧಾರಗಳಿಂದ ತೋರಿಸುತ್ತಾರೆ. ಈ ತಪ್ಪುಗಳಿಗಾಗಿ ಭವಿಷ್ಯದಲ್ಲಿ ತಾವು ತರಬೇಕಾದ ಬೆಲೆಯನ್ನು ತಿಳಿಸಿರುತ್ತಾರೆ. ಲೇಖಕರು ಪರ್ಯಾಯ ಅಭಿವೃದ್ಧಿ ತಂತ್ರವನ್ನು ಹೇಳುತ್ತಾರೆ. ಅದನ್ನು ಅವರು "ಪೂರೋಗಾಮಿ ಪರಿಸರತ್ಮಾಕ ಪ್ರಜಾಪ್ರಭುತ್ವ" ವೆಂದು ಕರೆಯುತ್ತಾರೆ. ಈ ಗ್ರಂಥ ಅನೇಕ ಸ್ಥಳೀಯ ಪರಿಸರವಾದಿ ಸಮೂಹಗಳ ಅನುಭವ ಮತ್ತು ಕೃತಿಯ ಮೇಲೆ ಆಧಾರಿತವಾಗಿದೆ.

ಮೂಲತಃ ಲೇಖಕರ ಸಂದೇಶವೇನೆಂದರೆ ಯಾವುದೇ ಅಭಿವೃದ್ಧಿಯ ಅಳತೆಗೋಲು ಮನುಷ್ಯ. ಈ ಮಾತನ್ನು ಈ ಮೊದಲು ಹೇಳಲಾಗಿದೆ. ಆದರೆ ಈಗ ಲೇಖಕರು ಈ ಮಾತನ್ನು ಅತ್ಯಾಶಯವಾಗಿ ನಂಬುವಂತೆ ಮಾಡಿದ್ದಾರೆ.

(ಸಾಭಾರ : ಡೆಕ್ಕನ್ ಹೆರಾಲ್ಡ್)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್‌ನ ದತ್ತು ಸೇವಾ ಕೇಂದ್ರದಲ್ಲಿದ್ದ ಕೇಶವ ಎಂಬ ಎಂಟು ತಿಂಗಳ ಮಗುವನ್ನು ದತ್ತು ಕೊಡಲಾಯಿತು. ಕೇಶವ ತಾಯಿಯಿಂದ ತ್ಯಜಿಸಲ್ಪಟ್ಟು ಕೇಂದ್ರಕ್ಕೆ ದಾಖಲಾದಾಗ ಒಂದು ವಾರದ ಮಗು, ಅತ್ಯಂತ ದುರ್ಬಲ. ಲಾಲನೆ-ಪಾಲನೆಯ ನಂತರ ಮಗು ಸದೃಢವಾಗಿಯೂ, ಆರೋಗ್ಯವಾಗಿಯೂ ಮತ್ತು ಭಾವಿ ದತ್ತು ತಂದೆ ತಾಯಿಗಳನ್ನು ಆಕರ್ಷಿಸುವಂತೆ ಬೆಳೆಯಿತು. ಈ ಮಗುವನ್ನು ೨೦೧೨ ಸೆಪ್ಟಂಬರ್ ೩೭ ರಂದು ಬೆಂಗಳೂರಿನ ದಂಪತಿಗಳಿಗೆ ದತ್ತುಕೊಡಲಾಯಿತು.

ಅಖಿಲ ಭಾರತ ವಾಕ್-ಶ್ರವಣ ಸಂಸ್ಥೆಯ ನಿವೃತ್ತ ನಿರ್ದೇಶಕರು, ರಂಗಕರ್ಮಿಗಳು ಆದ ಡಾ॥ ನ.ರತ್ನ ಮತ್ತು ಅವರ ಪತ್ನಿ ಭೇಟಿಕೊಟ್ಟರು.

ಟ್ರಸ್ಟಿನ ಸ್ಥಾಪನೆಯ ದಿನದಿಂದಲೂ ಸಂಸ್ಥೆಯ ಹಿತೈಷಿಗಳಾಗಿ ಮಾರ್ಗದರ್ಶಕರಾಗಿದ್ದ ಚಿಕ್ಕನಾಯಕನಹಳ್ಳಿಯ ದಿವಂಗತ ಜಿ.ವಿ.ನಾರಾಯಣಮೂರ್ತಿಯವರ ಸುಪುತ್ರ ಪ್ರೊ॥ನಾ.ದಯಾನಂದ ಭೇಟಿಕೊಟ್ಟರು.

ಸುಮಾರು ಐವತ್ತು ವರ್ಷಗಳಿಂದ ನಿರಂತರವಾಗಿ ತಮ್ಮನ್ನು ಖಾದಿ ಕ್ಷೇತ್ರಕ್ಕೆ ಸಮರ್ಪಿಸಿಕೊಂಡು ಈಗಲೂ ನಂಜನಗೂಡು ತಾಲ್ಲೂಕು ತಗಡೂರು ಎಂಬ ಅತ್ಯಂತ ಸಾಧಾರಣ ಹಳ್ಳಿಯಲ್ಲಿ ನೆಲೆಸಿರುವ ಟಿ.ಜಿ.ಸತ್ಯನಾರಾಯಣರವರು ಟ್ರಸ್ಟಿಗೆ ಭೇಟಿಕೊಟ್ಟರು.

ಟ್ರಸ್ಟಿನಲ್ಲಿ ಉತ್ಪಾದಿತವಾಗುತ್ತಿರುವ ಖಾದಿ ಉತ್ಪನ್ನಗಳನ್ನು ಟ್ರಸ್ಟಿನ ಅಭಿಮಾನಿ ಮತ್ತು ಹಿತಚಿಂತಕರಾದ ಬೆಂಗಳೂರಿನ ತಾರಾ ಅಸ್ಲಂರವರು ಇದೇ ಅಕ್ಟೋಬರ್ ೨ರಂದು ದೆಹಲಿಯಲ್ಲಿ ನಡೆಯಲಿರುವ ಮೇಳದಲ್ಲಿ ಪ್ರದರ್ಶನ ಮತ್ತು ಮಾರಾಟ ಮಾಡುತ್ತಾರೆ. ಈ ಅಭಿಮಾನಿ ಮಿತ್ರರೆಲ್ಲರಿಗೂ ಟ್ರಸ್ಟ್ ವಂದಿಸುತ್ತದೆ.

೨೦೧೨ ಸೆಪ್ಟಂಬರ್ ಮಾಹೆಯ ದಾನಿಗಳು

ಶ್ರೀ ಶ್ರೀಕಾಂತ್ ನೊಣಂಬೂರು, ಡಾ॥ಶಕುಂತಲಾ ನಾಗರಾಜು, ಶ್ರೀ ಹೆಚ್.ವಿ.ಪ್ರಹ್ಲಾದ್, ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ, ಶ್ರೀ ಬಿ.ಎನ್.ನಾರಾಯಣ, ಶ್ರೀ ಬಿ.ಆರ್.ವಾಸುಕಿ, ಶ್ರೀ ಎಸ್.ಆರ್.ಅರುಣ್‌ಕುಮಾರ್, ಡಾ॥ನಾಗೇಶ್ ವೆಂಕಟೇಶ್ ಶಾನ್‌ಭಾಗ್, ಎಚ್.ಎಸ್.ದಕ್ಷಿಣಾಮೂರ್ತಿ- ಬೆಂಗಳೂರು

ಡಾ॥ಶಿವಪ್ರಕಾಶ್, ಡಾ॥ನ.ರತ್ನ, ಶ್ರೀ ಎಂ.ಕೆ.ನಿರಂಜನರಾಜೇ ಅರಸ್, ಶ್ರೀಮತಿ ದೇವೀರಮ್ಮಣ್ಣಿ, ಶ್ರೀ ಯದುಪತಿಪುಟ್ಟಿ-ಮೈಸೂರು

ಶ್ರೀ ಎಂ.ಎಸ್.ಶಶಿಧರ - ಪುಣೆ; ಶ್ರೀ ವಿಶ್ವನಾಥ್ ಕಾಮತ್-ಮಂಗಳೂರು; ಶ್ರೀ ಎಂ.ಎಸ್.ವೆಂಕಟೇಶ್-ಮಂಡ್ಯ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೧೦೫

– *ಸುರೇಂದ್ರ ಕೌಲಗಿ*



ಟ್ರಸ್ಟಿನ ಪ್ರಮುಖ ಕಾರ್ಯಕ್ರಮವಾಗಿದ್ದ ಅಂಗವಿಕಲ ಮಕ್ಕಳ ಶಾಲೆ ಕರುಣಾಗೃಹ. ಈ ಚಟುವಟಿಕೆ ನಿಂತುಹೋಗಿ ಹಲವಾರು ವರ್ಷಗಳು ಕಳೆದವು. ಈ ದೀರ್ಘಾವಧಿಯಲ್ಲಿ ಅನೇಕ ಪ್ರಕಾರದ ನೆನಪುಳಿಯುವ ಸಂಗತಿಗಳಿವೆ. ಗೋವಿಂದ, ಉಮೇಶ, ಆಗುಂಬೆ ಸುರೇಶ, ವೆಂಕಟದೊಡ್ಡಿಯ ಮುನಿವೆಂಕಟಯ್ಯ, ಮಂಗಳೂರಿನ ಪಿ.ಎಲ್.ಕುಮಾರಸ್ವಾಮಿ, ಹನುಮಂತ ಮುಂತಾದ ಹಿರಿಯ ವಿದ್ಯಾರ್ಥಿಗಳು ಈಗ ಇಲ್ಲ. ಆದರೆ ಅವರು ಚಿಕ್ಕವರಾಗಿದ್ದಾಗ ಕರುಣಾಗೃಹಕ್ಕೆ ಬಂದು ತಮ್ಮ ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡಿದಾಗ ಕರುಣಾಗೃಹದಿಂದ ಸರ್ಕಾರಿ ಶಾಲೆಗೆ ಹೋಗಿ ಬರುತ್ತಿದ್ದ ಒಂಟೆತ್ತಿನ ಗಾಡಿಯ ಪಾತ್ರವನ್ನು ಮರೆಯಲಾಗದು. ಇಷ್ಟು ವರ್ಷಗಳ ತರುವಾಯವೂ ಆ ೪ ಅಡಿ ಅಗಲ, ೬ ಅಡಿ ಉದ್ದ, ೨ ಅಡಿ ಎತ್ತರದ ಹಸಿರು ಬಣ್ಣದಿಂದ ಸಿಂಗಾರಗೊಂಡಿದ್ದ ಎತ್ತಿನಗಾಡಿಯ ಮುಂಭಾಗ ಗಾಡಿ ಎಳೆಯಲು ಬಹಳ ಉತ್ಸಾಹದಿಂದ ಸಿದ್ಧವಾಗಿರುತ್ತಿದ್ದ ಬಸವ ಎಂಬ ಆ ಕಪ್ಪು ಎತ್ತು ಇಂದಿಗೂ ಕಣ್ಣು ಮುಂದೆ ಕಟ್ಟಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಕರುಣಾಗೃಹದ ಸುಮಾರು ೧೦-೧೨ ಬಾಲಕ-ಬಾಲಕಿಯರು ಒಟ್ಟಿಗೆ ಕುಳಿತು ತಮ್ಮ ಕಣ್ಣಿನಲ್ಲಿ ಯಾವುದೋ ಒಂದು ಭರವಸೆಯನ್ನು ಹೊತ್ತು ಶಾಲೆಗೆ ಹೋಗುವಾಗ ಕೈ ಬೀಸಿ ಹೋಗಿ ಬರುತ್ತೇವೆ ಎಂಬ ಸೂಚನೆಯಾಗಿ ಕೈ ಮೇಲೆತ್ತಿ ಜೈಜಗತ್ ಹೇಳುತ್ತಿದ್ದ ದೃಶ್ಯವೂ ಸಹ ಹಚ್ಚ ಹಸಿರಾಗೇ ಇದೆ. ೧೯೬೩ರ ಸುಮಾರಿನಲ್ಲಿ ಮೇಲುಕೋಟೆಯಲ್ಲಿ ಯಾವ ವಾಹನಗಳ ಪ್ರವೇಶವಾಗಿರಲಿಲ್ಲ. ಸೈಕಲ್ ಮತ್ತು ಕೆಲವು ಎತ್ತಿನ ಗಾಡಿಗಳು ಮಾತ್ರ ಇದ್ದವು. ಆಟೋ ರಿಕ್ಷಾ ಬರುವ ಯಾವ ಸೂಚನೆಯೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸಕ್ಕೆಂದೇ ಬಂದಿದ್ದ ಅಂಗವಿಕಲ ಮಕ್ಕಳನ್ನು ಪ್ರತಿದಿನ ಶಾಲೆಗೆ ಕಳುಹಿಸುವುದು ಹೇಗೆ ಎಂಬ ಪ್ರಶ್ನೆ ಎದುರಾಯಿತು.

ಪರಿಹಾರ ಕಂಡುಹಿಡಿಯುವ ಪ್ರಯತ್ನ ಭರದಿಂದ ಸಾಗಿತು. ಕರುಣಾಗೃಹದ ಮಕ್ಕಳಲ್ಲಿ ಪ್ರಧಾನ ದೋಷ ಇದ್ದದ್ದು ಶಾರೀರಿಕವಾಗಿ. ಅವರಲ್ಲಿ ಯಾರಿಗೂ ಸ್ವತಂತ್ರವಾಗಿ ನಿಲ್ಲಲು ಮತ್ತು ನಡೆಯಲು ಆಗುತ್ತಿರಲಿಲ್ಲ. ಹೆಚ್ಚು ಸಂಖ್ಯೆಯ ಮಕ್ಕಳು ನೆಲದ ಮೇಲೆ ಕೈಯೂರಿ ಹಾವಿನಂತೆ ಹರಿದಾಡುತ್ತಿದ್ದರು. ಇನ್ನೂ ಕೆಲವರು ಬಗ್ಗಿ ಕೈಯೂರಿ ಮುಖ ಮೇಲು ಮಾಡಿಕೊಂಡು ನಡೆಯುತ್ತಿದ್ದರು. ಇನ್ನೂ ಕೆಲವರು ತಮ್ಮ ೧೦-೧೨ನೇ

ವರ್ಷದ ಪ್ರಾಯದಲ್ಲಿ ಅಂಬೆಗಾಲಿಟ್ಟು ನಡೆಯುತ್ತಿದ್ದರು. ಒಂದಿಬ್ಬರಿಗೆ ಕೈಹಸ್ತ ಅಥವಾ ಕಾಲುಗಳ ಪಾದ ಇರಲಿಲ್ಲ. ಒಬ್ಬ ಹುಡುಗನಿಗೆ ೨ ಕೈಗಳು ಮೋಟಾಗಿದ್ದವು. ಒಂದಿಬ್ಬರು ಊರುಗೋಲು ಹಿಡಿದು ನಡೆಯುತ್ತಿದ್ದರು. ಒಬ್ಬ ವಿದ್ಯಾರ್ಥಿನಿಯಂತೂ ಗಿರುಗಿಟ್ಟಲೆಯಂತೆ ತಿರುಗಿಕೊಂಡು ಮುಂದೆ ಹೋಗುತ್ತಿದ್ದಳು. ಇಂತಹ ನಿಸ್ಸಹಾಯಕ ವೈವಿಧ್ಯಪೂರ್ಣ ಅಂಗವಿಕಲರನ್ನು ಶಾಲೆಗೆ ಕಳುಹಿಸಬೇಕಾದರೆ ೧ ಎತ್ತಿನಗಾಡಿಯನ್ನು ಮಾಡಿಸುವ ಪ್ರಯತ್ನ ಶುರುವಾಯಿತು. ಆಗ ನೆರವಿಗೆ ಬಂದವರು ಶ್ರೀರಂಗಪಟ್ಟಣದ ಡಾ॥ಸಿ.ಬಂದೀಗೌಡರು. ಬಂದೀಗೌಡರು ಕಾಂಗ್ರೆಸ್ ನಾಯಕರು. ವಿಧಾನಪರಿಷತ್ ಸದಸ್ಯರು ಮತ್ತು ಜನಪ್ರಿಯ ಬಡವರಬಂಧು ಡಾಕ್ಟರ್ ಆಗಿದ್ದರು. ಅವರಲ್ಲಿ ಸಮಾಜ ಸೇವೆಯ ಭಾವನೆ ಇದ್ದಿತು. ಅದೇ ಸಮಯದಲ್ಲಿ ಟ್ರಸ್ಟಿನ ಕಾರ್ಯದರ್ಶಿಯವರು ಟ್ರಸ್ಟ್ ನಡೆಸುತ್ತಿದ್ದ ವಯಸ್ಕ ಮಹಿಳೆಯರ ಪುನರ್ ವಸತಿ ಯೋಜನೆ ಜನಪದ ಮುದ್ರಣಾಲಯಕ್ಕೆ ಮುದ್ರಣ ಕೆಲಸ ನೀಡುತ್ತಿದ್ದ ಶ್ರೀರಂಗಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘಕ್ಕೆ ಹೋಗಿ ಬರುತ್ತಿದ್ದರು. ಡಾ॥ಬಂದೀಗೌಡರು ಅದರ ಅಧ್ಯಕ್ಷರಾಗಿದ್ದರು. ಸಮಾಜೋಪಯೋಗಿ ಕೆಲಸಕ್ಕಗಿ ಸಹಕಾರ ಸಂಘದಲ್ಲಿ ಧರ್ಮದ ನಿಧಿ ಇದೆ ಎಂದು ಗೊತ್ತಾಯಿತು. ಕರುಣಾಗೃಹದ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿ ಬರಲು ಒಂದು ಪುಟ್ಟ ಎತ್ತಿನ ಗಾಡಿಯ ಅವಶ್ಯಕತೆ ಬಗ್ಗೆ ಪ್ರಸ್ತಾಪಿಸಿದೆ. ಅವರು ಇದನ್ನು ತಕ್ಷಣ ಒಪ್ಪಿಕೊಂಡು ಸಂಘದ ಮುಂದಿನ ಸಭೆಯಲ್ಲಿ ವಿಷಯ ಇಟ್ಟು ತೀರ್ಮಾನಿಸಿ ಧನ ಸಹಾಯ ಮಾಡುವುದಾಗಿ ಭರವಸೆಕೊಟ್ಟರು. ಮುಂದೆ ಆ ಪ್ರಕಾರ ೨-೩ ತಿಂಗಳಲ್ಲಿಯೇ ನನ್ನನ್ನು ಕರೆಸಿ ಗಾಡಿಯನ್ನು ಮಾಡಿಸಿಕೊಡುವುದಾಗಿ ಹಣವನ್ನು ನೇರವಾಗಿ ಕೈಗೆ ಕೊಡುವುದಿಲ್ಲವಾಗಿಯೂ ಅದನ್ನು ಗಾಡಿ ತಯಾರಿಸುವವರ ಹೆಸರಿನಲ್ಲಿ ಚೆಕ್ ಮೂಲಕ ಕೊಡುವುದಾಗಿ ಹೇಳಿದರು. ೬೦ರ ದಶಕದಲ್ಲಿ ಶ್ರೀರಂಗಪಟ್ಟಣ ಸಮೀಪದ ಗಂಜಾಂ ಎಂಬ ಊರು ಎತ್ತಿನಗಾಡಿ ತಯಾರಿಕೆಗೆ ಸುಪ್ರಸಿದ್ಧವಾಗಿತ್ತು. ಗಂಜಾಂ ಎತ್ತಿನಗಾಡಿ ಎಂದರೆ ಒಳ್ಳೆಯ ಗುಣಮಟ್ಟದ ಗಾಡಿ ಎಂದು, ರೈತಸ್ನೇಹಿ ವಾಹನವೆಂದು ಹೆಸರಾಗಿತ್ತು. ಆದ್ದರಿಂದ ಆಗ ಗಂಜಾಂನಲ್ಲಿ ಹೆಸರು ಪಡೆದಿದ್ದ ಗಾಡಿತಯಾರಕರಲ್ಲಿಗೆ ಹೋಗಲು ನನಗೆ ತಿಳಿಸಿದರು. ಅದರಂತೆ ಮೊಟ್ಟ ಮೊದಲ ಬಾರಿಗೆ ಗಂಜಾಂಗೆ ೨-೩ ಕಿ.ಮಿ. ದೂರ ನಡೆದು ಹೋದೆ. ಸಂಬಂಧಿಸಿದ ವ್ಯಕ್ತಿಯನ್ನು ಭೇಟಿ ಮಾಡಿ ನಾನು ಬಂದ ಉದ್ದೇಶವನ್ನು ಅವರಿಗೆ ತಿಳಿಸಿದೆ. ಅದಕ್ಕೆ ಅವರು ಬಹಳ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು. ಇದುವರೆಗೆ ಬಹಳಷ್ಟು ದೊಡ್ಡ ಜೋಡಿ ಎತ್ತಿನ ಗಾಡಿಗಳನ್ನು ತಯಾರಿಸಿದ್ದರೂ ಈಗ ವಿಶಿಷ್ಟ ಪ್ರಕಾರದ ಗಾಡಿ ತಯಾರಿಸುವುದು ಒಂದು ಸವಾಲು ಹಾಗೂ ಜೀವನದ ಸಾರ್ಥಕ್ಯತೆ ಕೂಡ ಎಂದು ಹೇಳಿದರು. ಅವರಿಗೆ ಡಾ॥ಬಂದೀಗೌಡರ ಪರಿಚಯವಿತ್ತು. ಇಡೀ ಮಂಡ್ಯ ಜಿಲ್ಲೆಗೆ ಈ ರೀತಿಯ ಗಾಡಿ ಪ್ರಥಮವಾಗಿರುವುದರಿಂದ ತಾವು ತಮಗೆ ಗೊತ್ತಿರುವಷ್ಟು ತಾಂತ್ರಿಕ ಸುಧಾರಣೆಯ ಮುಖಾಂತರ ಒಳ್ಳೆಯ ಗಾಡಿ ತಯಾರಿಸಿ ಕೊಡುವುದಾಗಿ ಭರವಸೆ ಕೊಟ್ಟರು. ನನಗೆ ತುಂಬ ಸಂತೋಷವಾಯಿತು. ಇದಲ್ಲದೆ

ಇದೇ ಗಂಜಾಂನ ವಿಶ್ವನಾಥ ಎಂಬ ಅಂಗವಿಕಲ ಬಾಲಕ ಕರುಣಾಗೃಹದಲ್ಲಿ ಇದ್ದ. ಅವನ ಮನೆ ಈ ಗಾಡಿ ತಯಾರಕರ ಕಾರ್ಖಾನೆಯ ರಸ್ತೆಯಲ್ಲಿಯೇ ಇತ್ತು. ವಿಶ್ವನಾಥನನ್ನು ಅವರು ನೋಡಿದ್ದರು. ವಿಶ್ವನಾಥನಿಗೆ ಎರಡು ಕಾಲುಗಳಿರಲಿಲ್ಲ. ಅವು ಮಡಚಿಕೊಂಡಿದ್ದವು. ಕೈಗಳಿಗೆ ಮರದ ಚಪ್ಪಲಿಗಳನ್ನು ಹಾಕಿಕೊಂಡು ಕುಪ್ಪಳಿಸಿಕೊಂಡು ಓಡಾಡುತ್ತಿದ್ದನು. ಇಂತಹ ಅಂಗವಿಕಲರ ಅಗತ್ಯಕ್ಕೆ ಪೂರಕವಾಗಿ ಯಾವ ಎತ್ತರದ ಗಾಡಿ ಇದ್ದರೆ ಹತ್ತಲು ಮತ್ತು ಇಳಿಯಲು ಸಹಾಯವಾಗುವುದೆಂಬ ಕಲ್ಪನೆ ಬಂದಿತ್ತು. ಇನ್ನು ಹೆಚ್ಚು ಅವರಿಗೆ ವಿವರಿಸಬೇಕಿರಲಿಲ್ಲ. ಕೊನೆಗೊಂದು ದಿನ ಗಾಡಿ ಸಿದ್ಧವಾಗಿ ಮೇಲುಕೋಟೆಗೆ ಸಹಕಾರಿ ಸಂಘದ ಲಾರಿಯಲ್ಲಿ ಬಂದಿಳಿಯಿತು. ಗಾಡಿ ಬಂದಿಳಿದ ಆ ಕ್ಷಣ ಮಕ್ಕಳಿಗೆಲ್ಲ ಅತ್ಯಂತ ಸಂತೋಷಕರವಾದದ್ದು. ಇಂದಿನ ಕಾಲಧರ್ಮಕ್ಕನುಗುಣವಾಗಿ ಟಾಟಾ ಸುಮೊದಂಥ ಗಾಡಿಯನ್ನು ಖರೀದಿಸಿದಂಥ ಸಂತೋಷ ಅವರದಾಗಿತ್ತು. ಇನ್ನು ಪ್ರಶ್ನೆ ಉಳಿಯಿತು, ಗಾಡಿ ಎಳೆಯಲು ಯೋಗ್ಯವಾದ ಎತ್ತನ್ನು ದೊರಕಿಸುವುದು. ಅದು ಕೂಡ ಸುಲಭದಲ್ಲಿ ಬಗೆ ಹರಿಯಿತು. ಪಕ್ಕದ ಬಳಿಘಟ್ಟ ಗ್ರಾಮದ ಪರಿಚಿತ ರೈತರೊಬ್ಬರು ನಮಗೆ ಅಗತ್ಯವಾದ ಎತ್ತನ್ನು ಕೇವಲ ೩೦೦ ರೂಪಾಯಿಗೆ ದೊರಕಿಸಿಕೊಟ್ಟರು. ಕಪ್ಪು ಬಣ್ಣದ ಆ ಬಸವನಿಗೆ ಜನರನ್ನು ಕೂರಿಸಿಕೊಂಡು ಗಾಡಿ ಎಳೆಯುವ ಅಭ್ಯಾಸವಿರಲಿಲ್ಲ. ಈ ಸಮಸ್ಯೆಯನ್ನು ರೈತನಮಗನಾಗಿದ್ದ ಕರುಣಾಗೃಹದ ವಿದ್ಯಾರ್ಥಿ ರುದ್ರಮೂರ್ತಿ ಬಗೆಹರಿಸಿದ. ಆ ಹೊಸ ಎತ್ತನ್ನು ಆ ಹೊಸ ಗಾಡಿಗೆ ಕಟ್ಟಿ ಜನಪದ ನಿಲಯದ ಮುಂಭಾಗದಲ್ಲಿರುವ ಮೈದಾನದಲ್ಲಿ ಹಲವಾರು ಬಾರಿ ಓಡಾಡಿಸಿ ಒಂದೆರಡು ದಿನದಲ್ಲಿ ಅಭ್ಯಾಸ ಮಾಡಿಸಿದ. ಹುಡುಗರೆಲ್ಲರು ಗಾಡಿ ಹತ್ತಲು ಪೈಪೋಟಿ ನಡೆಸಿದರು. ಗಾಡಿ ಅವರು ಸುಲಭವಾಗಿ ಹತ್ತುವಂತೆ ಮತ್ತು ಇಳಿಯುವಂತೆ ಇತ್ತು. ಆ ಎರಡು ಚಕ್ರಗಳಿಗೆ ಟಯರ್ ಇರದೆ, ಅಗಲವಾದ ಟಯರ್‌ಪಟ್ಟಿ ಇತ್ತು. ಮೇಲುಕೋಟೆಯಲ್ಲಿ ಗಾಡಿಯ ಟಯರ್ ಪಂಚರ್ ಆದರೆ ನಮಗೆ ತೊಂದರೆ ಆಗುವುದೆಂದು ಆ ಗಾಡಿಯ ನಿರ್ಮಾತೃ ಈ ಹೊಸಬಗೆಯ ಪಟ್ಟಿಯನ್ನು ತಯಾರಿಸಿ ಎರಡು ಚಕ್ರಗಳಿಗೂ ಹಾಕಿದ್ದರು. ಅವಕ್ಕೆ ಗಾಳಿ ತುಂಬುವ ಮತ್ತು ಪಂಚರ್ ತೆಗೆಯುವ ಗೋಜು ಇರಲಿಲ್ಲ.

(ಮುಂದುವರಿಯುವುದು..)

* * *

ಸರ್ವೋದಯ ಆಂದೋಲನದ ಮುನ್ನಡೆ

ಕುಡಂಕುಲಂ ಪರಮಾಣು ಸ್ಥಾವರ : ಸರ್ವೋದಯ ನಿಲುವು

ದೇಶದಲ್ಲಿ ವಿದ್ಯುತ್‌ಗಾಗಿ ಸ್ಥಾಪಿಸಲ್ಪಡುತ್ತಿರುವ ಅಣುಸ್ಥಾವರಗಳ ಬಗ್ಗೆ ಸರ್ವ ಸೇವಾ ಸಂಘ ಚಿಂತಿತವಾಗಿದೆ. ಅಣುಸ್ಥಾವರ ಮತ್ತು ಅಣುಬಾಂಬ್ ಎರಡೂ ಅಪಾಯಕಾರಿ. ಪರಮಾಣು ವಿದ್ಯುತ್ ಕೈಗಾರಿಕೆ ಅತ್ಯಂತ ಅಪಾಯದ ಜಟಿಲ ಮತ್ತು ತುಂಬ ದುಬಾರಿ ತಾಂತ್ರಿಕತೆ. ಇದರಿಂದ ಹೊರಹೊಮ್ಮುವ ವಿಕಿರಣದ ಪ್ರಭಾವ ಬಹಳ ಘಾತಕ. ಅಣುಸ್ಥಾವರದಿಂದ ಹೊರಡುವ ತ್ಯಾಜ್ಯವಸ್ತುವನ್ನು ನಿಷ್ಕ್ರಿಯಗೊಳಿಸುವ ತಾಂತ್ರಿಕತೆ ಇದುವರೆಗೂ ಲಭ್ಯವಿಲ್ಲ. ಇದರಿಂದ ಹೊರ ಸೂಸುವ ವಿಕಿರಣದ ಪ್ರಭಾವ ಸಾವಿರಾರು ವರ್ಷಗಳ ವರೆಗೆ ಇರುತ್ತದೆ. ಎಷ್ಟೋ ಪೀಳಿಗೆಯ ಮೇಲೆ ಪ್ರಭಾವ ಬೀಳುತ್ತದೆ. ಜಪಾನ್ ನಾಗಾಸಕಿ ಮತ್ತು ಹಿರೋಷಿಮಾಗಳ ಮೇಲೆ ೧೯೪೨ರಲ್ಲಿ ಹಾಕಲಾದ ಅಣುಬಾಂಬಿನ ಪ್ರಭಾವ ಇಂದಿಗೂ ಕಂಡು ಬರುತ್ತಿದೆ. ಜಪಾನಿನ ಹುಕೋಶಿಮಾ ಅಣುಸ್ಥಾವರದಲ್ಲಿ ಪರಿಸರ ಗಂಡಾಂತರದಿಂದ ಉತ್ಪನ್ನವಾದ ತೊಂದರೆಯಿಂದ ಇಡೀ ವಿಶ್ವದ ಪರಮಾಣುವಾದಿಗಳು ಮತ್ತು ರಾಜಕಾರಣಿಗಳು ಪುನರ್ ವಿಚಾರ ಮಾಡುವುದಕ್ಕೆ ಒತ್ತಾಯವಾಗಿದೆ. ಇದರಿಂದಾಗಿ ಪರಮಾಣು ಸ್ಥಾವರಗಳ ಔಚಿತ್ಯದ ಬಗ್ಗೆ ಪ್ರಶ್ನೆ ಚಿನ್ಹೆ ಉಂಟಾಗಿದೆ. ೧೯೭೯ರಲ್ಲಿ ತಿಮಾಯಿಲಕ್ ಐಲೆಂಡ್ ದುರ್ಘಟನೆ ನಂತರ ಇದುವರೆಗೆ ಅಮೇರಿಕಾ ಯಾವುದೇ ಪರಮಾಣು ಸ್ಥಾವರಗಳನ್ನು ಸ್ಥಾಪಿತಮಾಡಿಲ್ಲ. ಹುಕೋಶಿಮಾದ ನಂತರ ಜರ್ಮನಿಯು ಮೇ ೩೦ ೨೦೧೨ಕ್ಕೆ ಒಂದು ತೀರ್ಮಾನ ಕೈಗೊಂಡಿದೆ. ಆ ಮೇರೆಗೆ ೨೦೨೦ರ ವೇಳೆಗೆ ತಮ್ಮಲ್ಲಿಯ ಎಲ್ಲ ಅಣುಸ್ಥಾವರಗಳನ್ನು ನಿಷ್ಕ್ರಿಯಗೊಳಿಸುವುದು. ಫ್ರಾನ್ಸ್‌ನಲ್ಲಿ ಶೇ.೭೫ರಷ್ಟು ವಿದ್ಯುತ್ ಉತ್ಪಾದನೆ ಅಣುವಿದ್ಯುತ್‌ನಿಂದ ಆಗುತ್ತದೆ. ೨೦೨೫ರ ವೇಳೆಗೆ ಅದನ್ನು ಶೇ.೫೦ಕ್ಕೆ ಇಳಿಸುವುದು ಮತ್ತು ತನ್ನ ಹಳೆಯ ಮತ್ತು ಶಿಥಿಲಗೊಂಡಿರುವ ರಿಯಾಕ್ಟರ್‌ಗಳನ್ನು ಇನ್ನು ಮುಂದೆ ವಿಸ್ತರಿಸದೇ ಇರುವುದಾಗಿ ಫ್ರಾನ್ಸ್ ತೀರ್ಮಾನ ಕೈಗೊಂಡಿದೆ. ಅಲ್ಲದೆ ನವೀಕರಿಸಬಹುದಾದ ಮೂಲಗಳ ಮೇಲೆ ಹೆಚ್ಚಾಗಿ ಹಣತೊಡಗಿಸುವುದು. ಸ್ವಿಜರ್‌ಲೆಂಡ್ ಹುಕೋಶಿಮಾದ ದುರಂತದ ನಂತರ ತನ್ನ ಪರಮಾಣು ಸ್ಥಾವರಗಳ ಮೇಲೆ ನಿರ್ಬಂಧ ಮಾಡಿತು. ಜಪಾನ್ ರಾಜಧಾನಿಯಲ್ಲಿ ಇತ್ತೀಚಿಗೆ ಅರವತ್ತು ಸಾವಿರಕ್ಕೂ ಹೆಚ್ಚು ಜನ ಪರಮಾಣು ಶಕ್ತಿಯ ವಿರುದ್ಧ ವಿರಾಟ ಪ್ರದರ್ಶನ ಮಾಡಿದರು. ಇಂದು ಜಗತ್ತಿನಲ್ಲಿ ಪರಮಾಣು ಶಕ್ತಿಯ ವಿರುದ್ಧ ಅಭಿಪ್ರಾಯಗಳು ಉಂಟಾಗುತ್ತಿವೆ. ಅನೇಕ ದೇಶಗಳ ಸರ್ಕಾರಗಳು ಅಣುಶಕ್ತಿಯ ಉಪಯೋಗವನ್ನು ಕಡಿಮೆ ಮಾಡಲು ಇಲ್ಲವೆ ಉತ್ಪಾದಿಸದಿರಲು ತೀರ್ಮಾನಿಸಿವೆ. ಇಂಥ ಪರಿಸ್ಥಿತಿಯಲ್ಲಿ ಭಾರತ ಸರ್ಕಾರದ ಮೂಲಕ ತಮಿಳುನಾಡಿನ ಸುನಾಮಿ ಪ್ರಭಾವಿತ ಕ್ಷೇತ್ರ ಕುಡಂಕುಲಂನಲ್ಲಿ ಪರಮಾಣು ಸ್ಥಾವರದ ವಿರುದ್ಧ ಭಾರಿ ಜನ ವಿರೋಧದ ತರುವಾಯವೂ ಪ್ರಾರಂಭಿಸಲು ತೀರ್ಮಾನಿಸಿರುವುದು ಚಿಂತೆಯ ವಿಷಯವಾಗಿದೆ. ಈ ಸ್ಥಾವರ ತುಂಬಾ ಜನಸಂಖ್ಯೆಯ ಪ್ರದೇಶದಲ್ಲಿ

ಸ್ಥಾಪಿಸಲ್ಪಡುತ್ತಿದೆ. ಸ್ಥಾವರದಿಂದ ೩೦ ಕಿ.ಮಿ. ಸುತ್ತಳತೆಯಲ್ಲಿ ೧೦ಲಕ್ಷ ಜನರಿದ್ದಾರೆ. ಈ ಸ್ಥಾವರ ಪ್ರಾರಂಭವಾದ ನಂತರ ಸಾವಿರಾರು ಮೀನುಗಾರರ ಉದ್ಯೋಗದ ಮೇಲೆ ಪ್ರಭಾವ ಉಂಟಾಗುವುದು. ಯಾವುದಾದರೂ ದುರ್ಘಟನೆ ಅಥವಾ ಆಕಸ್ಮಿಕವಾದಲ್ಲಿ ಆಯೋಡಿನ್-೧೩೧,೧೩೨,೧೩೩;ಸಿಜಿಯಂ-೧೩೪,೧೩೬,೧೩೭; ಹೈಸೋಟೋಪ್ಸೊ ಹಾಗೂ ಎಸ್ಟಾಟಿಯಮ್, ಟೀಟಿಯಂ, ಟೆರೋರಿಯಂ ಇತ್ಯಾದಿ ರೇಡಿಯೋಆಕ್ಟಿವ್ ಪದಾರ್ಥಗಳ ಕಾರಣದಿಂದಾಗಿ ಗಾಳಿ, ನೀರು, ಬೆಳೆ, ದನಕರು, ಭೂಜಲ, ಸಮುದ್ರ ಮೀನುಗಳು ಇತ್ಯಾದಿಗಳು ಪ್ರಭಾವಿತಗೊಳ್ಳುವವು. ಮೊದಲೇ ದಕ್ಷಿಣದ ತೀರದ ಮೇಲೆ ಥೋರಿಯಂ ಆದಿ ದುರ್ಬಲ ಪದಾರ್ಥಗಳ ಗಣಿಗಾರಿಕೆಯಿಂದ ಕ್ಯಾನ್ಸರ್, ಮಂದಬುದ್ಧಿ, ಜನ್ಮಜಾತ ಅಂಗವಿಕಲತೆ ಇತ್ಯಾದಿ ರೋಗಗಳು ಹೆಚ್ಚುತ್ತಿವೆ. ಕುಡಂಕುಲಂ ವಿದ್ಯುತ್ ಸ್ಥಾವಿರ ಶುರುವಾಗುವುದರಿಂದ ಇನ್ನಷ್ಟು ಪರಿಸ್ಥಿತಿ ದುರ್ಬರವಾಗುವುದು. ಆದ್ದರಿಂದ ಸ್ಥಳೀಯ ಜನರು ಈ ಸ್ಥಾವರದ ವಿರುದ್ಧ ಇದ್ದಾರೆ ಮತ್ತು ಚಳುವಳಿ ನಡೆಸುತ್ತಿದ್ದಾರೆ. ಸರ್ವ ಸೇವಾ ಸಂಘ ಶಾಂತಿಪೂರ್ಣ ಕಾರಣಕ್ಕಾಗಿಯೂ ಅಣುಶಕ್ತಿ ವಿದ್ಯುತ್‌ನ ಉಪಯೋಗದ ವಿರುದ್ಧವಿದೆ. ಈ ವಿಷಯವಾಗಿ ೨೦೦೮ ಮೇ ೭ರಿಂದ ೨೦ರ ವರೆಗೆ ಸರ್ವಸೇವಾ ಸಂಘವು ಬಿಹಾರದ ಭೋಧಗಯಾದಿಂದ ದೆಹಲಿಯ ರಾಜಘಾಟ್‌ವರೆಗೆ ಅಂದರೆ ಗೌತಮನಿಂದ ಗಾಂಧೀವರೆಗೆ ಅಣುಮುಕ್ತಿಯ ಯಾತ್ರೆಯ ಸಂಘಟನೆ ಮಾಡಿತು. ದೇಶದ ಒಟ್ಟು ಉತ್ಪಾದನೆಯ ಶೇ.೩ರಷ್ಟು (೪೭೮೦ ಮೆಗಾವ್ಯಾಟ್) ಅಣುಶಕ್ತಿಯಿಂದ ಆಗುವುದು. ಕೋಟ್ಯಂತರ ಡಾಲರ್ ಮೊತ್ತವನ್ನು ಖರ್ಚುಮಾಡಿದ ನಂತರವೂ ಇಷ್ಟೇ ಉತ್ಪಾದನೆಯಾಗುವುದಾದರೆ ಇದರಿಂದ ಏನು ಲಾಭ? ಅಣುವಿದ್ಯುತ್ ಅಗ್ಗವೂ ಅಲ್ಲ, ಸುರಕ್ಷಿತವೂ ಅಲ್ಲ. ಶಕ್ತಿ ಸ್ವಚ್ಛವಾಗಿರುತ್ತದೆ ಎಂಬುದು ಕೂಡ ಭ್ರಾಮಕವಾಗಿದೆ. ಇದಕ್ಕಾಗಿ ಯುರೇನಿಯಂ ಆಯಸ್ಕಗಳನ್ನು ಭೂಮಿಯ ಹೊರಗೆ ತೆಗೆಯುವುದು ಮರುಬಳಕೆಯ ರೂಪದಲ್ಲಿ ಪರಿವರ್ತಿಸುವುದು ಅತ್ಯಂತ ಅಪಾಯಕಾರಿ ಕೆಲಸವಾಗಿದೆ. ಇದರಲ್ಲಿ ವಿಕಿರಣಕ್ಕೆ ಒಳಗಾಗುವ ಸಂಭವ ಯಾವಾಗಲೂ ಇರುತ್ತದೆ. ಹೆಚ್ಚು ಜನ ನ್ಯುಕೋಮಿಯಾಕ್ಕೆ ಬಲಿಯಾಗಿ ಸಾಯುತ್ತಾರೆ. ಕುಡಂಕುಲಂನಲ್ಲಿ ಅಣುಸ್ಥಾವರದ ವಿರುದ್ಧ ಸ್ಥಳೀಯ ಜನರ ಶಾಂತಿ ಪೂರ್ಣ ಆಂದೋಲನದ ದಮನ ಮತ್ತು ಆಂದೋಲನಕಾರಿಗಳ ಮೇಲೆ ಸುಳ್ಳು ಖಟ್ಲೆ ಹಾಕುವುದನ್ನು ಸರ್ವ ಸೇವಾ ಸಂಘ ವಿರೋಧಿಸುತ್ತದೆ ಮತ್ತು ಆಂದೋಲನದೊಂದಿಗೆ ತನ್ನ ಒಗ್ಗಟ್ಟನ್ನು ಪ್ರದರ್ಶಿಸುತ್ತದೆ. ಜಯತಾಪುರ(ಮಹರಾಷ್ಟ್ರ), ಮೀಟಿಮೀಡಿ(ಗುಜರಾತ್) ಅಲ್ಲದೆ ವತೇಹಬಾದ್(ಹರಿಯಾಣ) ಸ್ಥಾವರಗಳನ್ನು ವಿರೋಧಿಸಿ ನಡೆಯುತ್ತಿರುವ ಆಂದೋಲನವನ್ನು ಸಮರ್ಥನೆ ಮಾಡುತ್ತದೆ. ಸರ್ವ ಸೇವಾ ಸಂಘದ ಅಧಿವೇಶನ ತನ್ನ ಈ ನಿರ್ಣಯದ ಬಗ್ಗೆ ಭಾರತ ಸರ್ಕಾರ ಪುನರ್‌ವಿಚಾರ ಮಾಡಿ ದೇಶದ ಹಿತದೃಷ್ಟಿಯಿಂದ ಈ ಪರಿಯೋಜನೆಯನ್ನು ರದ್ದು ಮಾಡಬೇಕೆಂದು ಅಪೀಲ್ ಮಾಡುತ್ತದೆ. ಅಣುವಿದ್ಯುತ್ ಬದಲು ನವೀಕರಿಸಬಹುದಾದ ವಿದ್ಯುತ್‌ಮೂಲದ ಸಂಶೋಧನೆ ಮಾಡಲಿ ಎಂದು ಅಪೀಲ್ ಮಾಡುತ್ತದೆ.

(೨೦೧೨ ಅಗಸ್ಟ ೧೩ರಂದು ರಾಜಾಸ್ತಾನದ ಕೋಟಾದಲ್ಲಿ ಸರ್ವಸೇವಾಸಂಘದ ಕಾರ್ಯಸಮಿತಿ ಅನುಮೋದಿಸಿದ ತೀರ್ಮಾನ)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ ವಿಶಾಲಾಕ್ಷಿ ಶರ್ಮ; ಶ್ರೀ ಎನ್.ಎಸ್.ಸುಬ್ಬಣ್ಣ – ಬೆಂಗಳೂರು
ಡಾ॥ ನ.ರತ್ನ, ಶ್ರೀಮತಿ ಪದ್ಮ ಪೂಜಾರಿ – ಮೈಸೂರು
ಶ್ರೀ ಕೆ.ನಾಗಪ್ಪ – ಮದ್ದೂರು: ಶ್ರೀ ಕೆ.ಟಿ.ವೆಂಕಟೇಶ್ – ಮಂಡ್ಯ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಎಚ್.ಶಿವಮಾದಯ್ಯ – ಮೈಸೂರು
ಶ್ರೀ ಎಸ್.ಕೆ.ಪುಟ್ಟಸ್ವಾಮಿಗೌಡ; ಶ್ರೀ ಮಲ್ಲಾರಾಧ್ಯ ಪ್ರಸನ್ನ – ಮಂಡ್ಯ
ಪ್ರೊ.ಎಂ.ಚಂದ್ರಶೇಖರಯ್ಯ – ಭದ್ರಾವತಿ
ಪ್ರಾಂಶುಪಾಲರು, ನಾಗಾರ್ಜುನ ಪ.ಪೂ.ಕಾಲೇಜು; ಶ್ರೀ ಡಿ.ಆರ್.ಬಾಲಕೃಷ್ಣ;
ಶ್ರೀ ಎನ್.ಬಿ.ರಾಜಪ್ಪ – ಬೆಂಗಳೂರು
ಶ್ರೀ ಜಿ.ಎನ್.ರಘು – ಗೋಪಾಲನಹಳ್ಳಿ
ಶ್ರೀ ವಿಶ್ವನಾಥ ಕಾಮತ್– ಮಂಗಳೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ–ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820



ಶ್ರೀಮತಿ/ ಶ್ರೀ... ಶ್ರೀ. B.N. ರವಿಪ್ರಕಾಶ್
#695, "ಮಾತೃಶ್ರೀ ನಿಲಯ"
ಗಣೇಶ ಸಾಮಿಲ್ ರಸ್ತೆ
ಟಿ. ದಾಸರಹಳ್ಳಿ
ಬೆಂಗಳೂರು. 560057

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.